ಹೊಸ ಮನುಷ್ಯ

ಚಿಂತನ ★ ದರ್ಶನ ★ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೬ ನವೆಂಬರ್-೨೦೦೫ ಸಂಚಿಕೆ-೪



ಮಕ್ಕಳ ಮುಷ್ಠಿಯಲ್ಲಿದೆ ಮನುಕುಲದ ಭವಿಷ್ಯ!

ಕನ್ನಡದ ಅಭಿವೃದ್ಧಿ ಹೇಗೆ?

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ನವೆಂಬರ್-೨೦೦೫

ಸಂಪುಟ-೬

ಸಂಚಿಕೆ-೪

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ

ಜನಪದ ಸೇವಾ ಟ್ರಸ್ಟ್

ಧರ್ಮದರ್ಶಿ ಮಂಡಳಿ

ಚಂದಾ ವಿವರ

ವಾರ್ಷಿಕ : ರೂ ೧೦೦/-

ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ

ಜನಪದ ಸೇವಾ ಟ್ರಸ್ಟ್(ರಿ)

ಮೇಲುಕೋಟೆ-೫೭೧ ೪೩೧

ಮಂಡ್ಯ ಜಿಲ್ಲೆ

✆(08236)298754

e-mail-janapada@yahoo.com

www.janapada.org

ಮಗುವಿನ ಪ್ರಾರ್ಥನೆ

ದೇವ ನಿನ್ನ ನಾಮ ನನ್ನ
ಮನದಿ ತುಂಬಿ ಹರಿಯಲಿ
ಮಲಿನವಳಿದು ಕಲುಷ ಕಳೆದು
ಭಕ್ತಿ ಭಾವ ಮೂಡಲಿ.
ನನ್ನ ಕಣ್ಣ ನೋಟದಲ್ಲಿ
ನಿನ್ನ ಬಿಂಬ ಕಾಣಲಿ
ಕಿವಿಯು ಕೇಳುತಿರಲು ಅಲ್ಲಿ
ನಿನ್ನ ನಾಮ ಮೊಳಗಲಿ.
ನನ್ನ ದೇಹಗುಡಿಯಲಿಂದು
ನಿನ್ನ ಮೂರ್ತಿ ನಿಲ್ಲಲಿ
ಸತ್ಯಶಾಂತಿಯುಳಿದು ಬೆಳೆದು
ಕಾಂತಿ ಕಿರಣ ಚಿಮ್ಮಲಿ.
ಪರಮ ಪರುಷದಂತೆ ಸರ್ವ
ಜಗವು ಸುಖಿಸಿ ಬಾಳಲಿ
ಅಮರ ಕೀರ್ತಿ ವಿಮಲ ನೀತಿ
ದಾರಿದೀಪ ತೋರಲಿ.
ನಡೆವ ಹೆಜ್ಜೆಗಳಲಿ ಬರುವ
ಅಡ್ಡಿ ಸರಿದು ಹೋಗಲಿ
ದುಡಿವ ದುಡಿಮೆಯೊಳಗೆ ನಿನ್ನ
ಕರುಣೆ ವಿಕಸವಾಗಲಿ.

-ಅಣ್ಣಾರಾಯ ಸಾಲಿಮನಿ

ವಿಚಾರ ದೀಪ್ತಿ

ಎಲ್ಲರಿಗೂ ಶಿಕ್ಷಣ ಎಂಬುದನ್ನು ವಿಶ್ವದಾದ್ಯಂತ ಹೇಗೆ ಸಂಯೋಜಿಸಬೇಕೆಂಬ ಬಗ್ಗೆ ಒಂದು ವರದಿ ಬಂದಿದೆ.(೨೦೦೫) ಈ ವರದಿಯು ಕಲಿಸುವಿಕೆ ಮತ್ತು ಕಲಿಯುವಿಕೆಯಲ್ಲಿನ ಗುಣಮಟ್ಟದ ಮೇಲೆ ಬೆಳಕು ಚೆಲ್ಲಿದೆ. ಈ ವರದಿಯನ್ನು ಯುನೆಸ್ಕೋ ಪ್ರಚುರ ಪಡಿಸಿದೆ. ಈ ವರದಿಯ ಪ್ರಕಾರ ಅನೇಕ ಅಭಿವೃದ್ಧಿಶೀಲ ದೇಶಗಳಲ್ಲಿರುವ ಮಕ್ಕಳಗ್ರಹಣ ಶಕ್ತಿಯು ಅಗತ್ಯವಿರುವ ಕನಿಷ್ಠಮಟ್ಟಕ್ಕಿಂತಲೂ ಕೆಳಗಿದೆಯೆಂದು ತಿಳಿದುಬಂದಿದೆ. ಪ್ರಾಥಮಿಕ ಹಂತದಲ್ಲಿ ಕೂಡ ಶಿಕ್ಷಕರು ವಿದ್ಯಾರ್ಥಿಗಳೊಂದಿಗೆ ಪ್ರತಿಕ್ರಿಯಿಸುವುದರಲ್ಲಿ ಮತ್ತು ಅವರನ್ನು ಅರ್ಥೈಸಿಕೊಳ್ಳುವುದರಲ್ಲಿ ಅಸಮರ್ಥರಾಗಿದ್ದಾರೆ. ಇದು ಅತ್ಯಂತ ಈಚಿನ ಶೋಧನೆಯಾಗಿದೆ. ಅಂದರೆ ಮಾನವ ಅಭಿವೃದ್ಧಿಯ ಅತ್ಯಂತ ಮೂಲಭೂತ ಅಂಶದ ಬಗ್ಗೆ ಇರುವ ಅಂತರರಾಷ್ಟ್ರೀಯ ಬದ್ಧತೆಯಲ್ಲಿಯ ಕೊರತೆಯೆಂದೇಳಬಹುದು. ದೇಶಗಳು ಜ್ಞಾನಾಧಾರಿತ ಆರ್ಥಿಕ ಕೇಂದ್ರಗಳನ್ನಾಗಿ ತಮ್ಮನ್ನು ಪರಿವರ್ತಿಸಿಕೊಳ್ಳುತ್ತಿರುವುದಾಗಿ ಹೇಳುತ್ತಿರುವ ಸಮಯದಲ್ಲಿ ಈ ವಿಷಯ ಬೆಳಕಿಗೆ ಬಂದಿರುವುದು ವಿರೋಧಾಭಾಸದ ಸಂಗತಿಯಾಗಿದೆ. ವಸ್ತು ತಯಾರಿಕೆ ಮತ್ತು ಉತ್ಪಾದನೆಯಲ್ಲಿ ತಂತ್ರಜ್ಞಾನಾಧಾರಿತ ಮಾಹಿತಿಯನ್ನು ಅವಲಂಬಿಸಬೇಕಾಗುತ್ತಿರುವ ಸಂದರ್ಭದಲ್ಲಿ ಅತ್ಯುನ್ನತ ಪರಿಣಿತ ಮತ್ತು ಜ್ಞಾನಗಳ ಅವಶ್ಯಕತೆ ಇದೆಯೆ ಹೊರತು ಕೇವಲ ತರಪೇತಿಯಿಲ್ಲದ ಶ್ರಮವಲ್ಲ. ಆದ್ದರಿಂದ ೨೦೧೫ರ ವೇಳೆಗೆ ಸಾಧಿಸಬೇಕೆಂದಿರುವ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ, ವಯಸ್ಕರ ಸಾಕ್ಷರತೆ, ಕಲಿಕೆಯಲ್ಲಿ ಲಿಂಗಸಮಾನತೆ ಮುಂತಾದ ಗುರಿಗಳು ಅಪಾಯಕ್ಕೆ ಗುರಿಯಾಗಕೂಡದು. ಈ ಎಲ್ಲ ದಿಸೆಗಳಲ್ಲಿ ಆಗುವ ಪ್ರಗತಿಯೆ ವಿಶ್ವಸಂಸ್ಥೆಯು ಈ ಸಹಸ್ರ ವರ್ಷಕ್ಕೆ ಗೊತ್ತುಪಡಿಸಿರುವ ಗುರಿಗಳನ್ನು ಮುಟ್ಟುವ ವಿಷಯದಲ್ಲಿ ಬಹುಮುಖ್ಯ ಸಂಗತಿಯಾಗುತ್ತದೆ. ಆಂತರಿಕ ಮತ್ತು ಬಾಹ್ಯ ರಕ್ಷಣೆಗಾಗಿ ಖರ್ಚುಮಾಡಲಾಗುವ ಹಣದ ಪ್ರಮಾಣಕ್ಕೂ ಮತ್ತು ಮಾನವ ಸಂಪನ್ಮೂಲಗಳ ಅಭಿವೃದ್ಧಿಯ ಖರ್ಚಿಗೂ ಬಹಳ ದೊಡ್ಡ ಅಂತರವಿದೆ. ಹದಿಮೂರುವರೆ ಕೋಟಿ ಮಕ್ಕಳು ಇಂದಿಗೂ ಶಾಲೆಯ ಹೊರಗಿದ್ದಾರೆ ಮತ್ತು ಶಾಲೆಗೆ ಹೋಗುವ ಮಕ್ಕಳಲ್ಲಿ ಶೇ.೭೫ ಕ್ಕೂ ಕಡಿಮೆ ಮಕ್ಕಳು ೫ನೇ ತರಗತಿಯನ್ನು ತಲುಪುತ್ತಾರೆ. ಸುಮಾರು ೮೦ ಕೋಟಿ ವಯಸ್ಕರು ನಿರಕ್ಷರಸ್ಥರಿದ್ದಾರೆ. ಅವರಲ್ಲಿ ಮೂರನೆ ಎರಡರಷ್ಟು ಹೆಂಗಸರಿದ್ದಾರೆ ಅವರಲ್ಲಿ ಶೇ. ೭೦ ರಷ್ಟು ಹೆಂಗಸರು ಸಬ್‌ಸಹರಾ ಆಫ್ರಿಕಾ, ಭಾರತ, ಚೀನಾ, ಬಾಂಗ್ಲಾದೇಶ ಮತ್ತು ಪಾಕಿಸ್ತಾನಗಳಲ್ಲಿದ್ದಾರೆ. ಇತ್ತೀಚಿಗಿನ ವರ್ಷಗಳಲ್ಲಿ ಶಿಕ್ಷಣ ಪಡೆಯುವ ಸೌಲಭ್ಯವು ವಿಸ್ತಾರಗೊಂಡಿದೆ. ಅದೇ ರೀತಿ ಶಿಕ್ಷಣಕ್ಕಾಗಿ ಖರ್ಚು ಮಾಡುವುದು ಹೆಚ್ಚಾಗಿದೆಯೆಂದು ೨೦೧೫ ನೇ ಇಸವಿಯ ವರದಿ ತಿಳಿಸುತ್ತದೆ. ಈ ಖರ್ಚನ್ನು ಸರಿದೂಗಿಸುವಂಥ ಸಂಪನ್ಮೂಲಗಳು ಮತ್ತು ಸೌಕರ್ಯಗಳು ಈ ದೇಶಗಳಲ್ಲಿ ಉಂಟಾಗಿಲ್ಲ. ೨೦೧೫ ರ ವೇಳೆಗೆ ವಿಶ್ವದಾದ್ಯಂತ ಪ್ರಾಥಮಿಕ ಶಿಕ್ಷಣವನ್ನು ಸಾಧಿಸುವುದಕ್ಕಾಗಿ ಪ್ರತಿ ವರ್ಷವೂ ೭.೬ ಬಿಲಿಯನ್ ಡಾಲರ್ ಹೆಚ್ಚುವರಿಯಾಗಿ ಬೇಕಾಗುತ್ತದೆಂದು ಅಂದಾಜಿಸಲಾಗಿದೆ. ಇತ್ತೀಚಿಗಿನ ಹಣದ ವಿತರಣೆಯನ್ನು ನೋಡಿದರೆ ಬಹಳ ದೊಡ್ಡ ಕೊರತೆ ಉಂಟಾಗುವುದೆಂದು ಅನಿಸುತ್ತದೆ.

ಉದ್ದೇಶಿಸಲಾಗಿರುವ ಗುರಿಗಳಿಗೂ ಮತ್ತು ನಿಜವಾದ ಕ್ರಿಯೆಗೂ ಸಂಬಂಧವೆ ಇಲ್ಲವೇನೊ ಎಂಬ ಸಂಗತಿ ವಿಶ್ವದಾದ್ಯಂತ ರಕ್ಷಣೆಗಾಗಿ ಆಗುತ್ತಿರುವ ಖರ್ಚನ್ನು ನೋಡಿದರೆ ಗೊತ್ತಾಗುತ್ತದೆ. ಅಮೇರಿಕಾ ದೇಶವೊಂದರಲ್ಲಿಯೆ ಮೂಲ ಅಂದಾಜುಪತ್ರಕ್ಕಿಂತ ಶೇ. ೩೫ ರಷ್ಟು ಹಣ ರಕ್ಷಣೆಗಾಗಿ ಮೀಸಲಾಗಿದೆ. ನಿಜವಾದ ಪ್ರಶ್ನೆಯೆನೆಂದರೆ ಸರ್ಕಾರವು ಹಣವನ್ನು ಎಲ್ಲಿ ನಿಜವಾಗಿ ಅಗತ್ಯವಿದೆಯೊ ಅಲ್ಲಿ ತೊಡಗಿಸಲು ಇಷ್ಟಪಡುತ್ತದೆಯೆ ಮತ್ತು ಸಮರ್ಥವಾಗಿದಿಯೆ ಎಂಬುದು. ಈ ಪ್ರಶ್ನೆಗೆ ಸವಾಲಾಗಿ ಶೈಕ್ಷಣಿಕ ಗುಣಮಟ್ಟ ಅವಲಂಬಿಸಿದೆ.

ಮಕ್ಕಳ ಮುಷ್ಠಿಯಲ್ಲಿದೆ ಮನುಕುಲದ ಭವಿಷ್ಯ!

-ಸುರೇಂದ್ರ ಕೌಲಗಿ

"ಮಕ್ಕಳು ಕ್ರಿಯಾಶೀಲರಾದ ಸಾಮಾಜಿಕ ಜೀವಿಗಳು. ಪ್ರಪಂಚದ ಬಗ್ಗೆ ಅವರು ಅರಿತುಕೊಳ್ಳುವ ಬಹಳಷ್ಟು ವಿಷಯವನ್ನು ಬೇರೆ ಜನರೊಂದಿಗೆ ವ್ಯವಹರಿಸುವುದರ ಮೂಲಕ ಪಡೆಯುತ್ತಾರೆ. ವ್ಯವಹಾರವು ಮಕ್ಕಳ ಆಲೋಚನೆಯನ್ನು ಸ್ಪಷ್ಟಪಡಿಸುತ್ತದಲ್ಲದೆ ಅವರ ತಿಳಿವಳಿಕೆಯನ್ನು ಮೊನಚುಗೊಳಿಸುತ್ತದೆ"

-ಲಿಯೊನಾರ್ಡ್ ಎಂ ಕೆನಡಿ

ಸಮಾಜದಲ್ಲಿ ಗ್ಲಾನಿಯಾದಾಗಲೆಲ್ಲ, ಅಧರ್ಮಹೆಚ್ಚಿದಾಗಲೆಲ್ಲ ಸಜ್ಜನರ ರಕ್ಷಣೆಗಾಗಿ, ದುರ್ಜನರ ಶಿಕ್ಷೆಗಾಗಿ ನಾನು ಅವತರಿಸುತ್ತೇನೆ ಎಂದು ಶ್ರೀಕೃಷ್ಣ ಹೇಳಿದ ಆದರೆ ಅಂಥ ಶ್ರೀಕೃಷ್ಣ ನಿಜವಾಗಿಯೂ ಹುಟ್ಟಿಬರುವನೆ? ಅಂಥ ರಕ್ಷಕ ಕೃಷ್ಣ ಹುಟ್ಟಿ ಬರುವುದನ್ನು ನಾವು ಕಾಯುತ್ತಾ ಕುಳಿತುಕೊಳ್ಳುವುದು ಸರಿಯೆ? ಈಗ ಸಮಾಜದಲ್ಲಿ ಗ್ಲಾನಿಯಾಗಿಲ್ಲವೆ? ಸಜ್ಜನರಿಗೆ ಪೀಡೆಯಾಗುತ್ತಿಲ್ಲವೆ? ದುರ್ಜನರ ಅಟ್ಟಹಾಸ ನಡೆದಿಲ್ಲವೆ? ಮಹಿಳೆಯರ ಮಾನಾಪಹರಣ ಆಗುತ್ತಿಲ್ಲವೆ? ಭ್ರೂಣ ಹತ್ಯೆ ನಡೆದಿಲ್ಲವೆ? ಹಣದ ದಬ್ಬಾಳಿಕೆ ನಡೆದಿಲ್ಲವೆ? ಪ್ರಕೃತಿಯ ವಸ್ತ್ರಾಪಹರಣ ನಡೆದಿಲ್ಲವೆ? ಹಾಗಾದರೆ ಶ್ರೀಕೃಷ್ಣ ಬರುವುದು ಇನ್ನು ಯಾವಾಗ? ಕೃಷ್ಣ ಬರಬಹುದು. ಬಂದರೆ ಮಹಾಭಾರತದಲ್ಲಿ ಚಿತ್ರಿತವಾಗಿರುವ ಕೃಷ್ಣನ ತರದಲ್ಲಲ್ಲ. ಹಾಗಾದರೆ ಯಾವ ತರದಲ್ಲಿ? ಸ್ವಂತ ನಮ್ಮ ಮಕ್ಕಳ ರೂಪದಲ್ಲಿ ಕೃಷ್ಣ ಬರುತ್ತಾನೆ. ಕೃಷ್ಣನ ಪ್ರಾತಿನಿಧಿಕ ಸ್ವರೂಪದ ಇಂದಿನ ಮಕ್ಕಳೇ ನಾಳಿನ ಭವಿಷ್ಯವನ್ನು ರೂಪಿಸಬಲ್ಲರು. ಅವರ ಮುಷ್ಠಿಯಲ್ಲಿಯೆ ಮನುಕುಲದ ಭವಿಷ್ಯವಿದೆ.

ಇಂದಿನ ಮಗುವೆ ನಾಳಿನ ತಂದೆ ಎಂಬರ್ಥದ ಗಾದೆಯೊಂದು ಇಂಗ್ಲಿಷ್ ಭಾಷೆಯಲ್ಲಿದೆ ಅದೇ ರೀತಿ ಮಗು ಹಳೆಯ ಮರದ ತುಂಡು ಎಂಬ ಇನ್ನೊಂದು ಗಾದೆ! ಪುತ ಎಂಬ ನರಕವನ್ನು ತಪ್ಪಿಸುವವ ಪುತ್ರ ಎಂಬ ವ್ಯಾಖ್ಯೆ ಮಕ್ಕಳ ವಿಷಯವಾಗಿ ಸಂಸ್ಕೃತ ಭಾಷೆಯಲ್ಲಿದೆ. ಮಕ್ಕಳಿಲ್ಲದವರ ಬಾಳು ಬಾಳಲ್ಲ ಎಂಬರ್ಥದ ಅನೇಕ ವಚನಗಳು, ಜಾನಪದಗೀತೆಗಳು ಕನ್ನಡ ಭಾಷೆಯಲ್ಲಿವೆ. ಹಿರಿಯರನ್ನು ಹಳೆ ಬೇರಿಗೂ ಮಕ್ಕಳನ್ನು ಹೊಸ ಚಿಗುರಿಗೂ ಹೋಲಿಸುವುದುಂಟು. ಹೀಗೆ ಜೀವನದಲ್ಲಿ ಮಕ್ಕಳ ಮಹತ್ವವನ್ನು ಕುರಿತಾದ ಅನೇಕ ಮಾತುಗಳು ಪ್ರಚಾರದಲ್ಲಿವೆ. ಇಂದು ಬೆಳೆಯುತ್ತಿರುವ ದೇಶದ ಪ್ರಜಾಕೋಟಿಯನ್ನು ನಿಯಂತ್ರಿಸುವ ಸಮರ ಒಂದೆಡೆ ನಡೆಯುತ್ತಿದ್ದರೆ ಇನ್ನೊಂದೆಡೆ ಮಕ್ಕಳಿಲ್ಲದ ದಂಪತಿಗಳಿಗೆ ಮಕ್ಕಳ ಭಾಗ್ಯವನ್ನು ಒದಗಿಸುವ ವೈಜ್ಞಾನಿಕ ಪ್ರಯತ್ನವೂ ನಡೆಯುತ್ತಿದೆ. ಮಕ್ಕಳು ಒಂದು

ಮನೆಯ ಸಂತೋಷ, ಒಂದು ದೇಶದ ಸ್ವತ್ತು, ಮನುಕುಲವನ್ನು ಮುಂದಕ್ಕೆ ಕೊಂಡೊಯ್ಯುವ ಹರಿಗೋಲು ಇತ್ಯಾದಿ ಮಾತುಗಳು ಸಹ ಮಕ್ಕಳ ಸುತ್ತ ಹೆಣೆಯಲ್ಪಟ್ಟಿವೆ. ಮಕ್ಕಳ ಭವಿಷ್ಯದಲ್ಲಿಯೆ ತಮ್ಮ ಭವಿಷ್ಯವನ್ನು ಕಾಣ ಪ್ರಯತ್ನಿಸುವುದು ಪ್ರತಿ ತಂದೆ-ತಾಯಿಗಳ ಸ್ವಭಾವವಾಗಿದೆ. ಮಕ್ಕಳ ಸುತ್ತಲೇ ದೊಡ್ಡವರ ಪ್ರಪಂಚ ಸುತ್ತುತ್ತಿರುತ್ತದೆ. ಈ ಮಾತು ಕುಟುಂಬಕ್ಕೆ ಹೇಗೊ ಹಾಗೆ ದೇಶಕ್ಕೂ, ಪ್ರಪಂಚಕ್ಕೂ ಅನ್ವಯಿಸುತ್ತದೆ. ಜೀವನಾನುಭವದ ಈ ಮಾತು ಜನತೆಯ ಮನಸ್ಸಿನೊಳಗೆ ಬಲವಾಗಿ ಬೇರೂರಲಿ ಮತ್ತು ತಮ್ಮ ದೃಷ್ಟಿಯನ್ನು ಮಕ್ಕಳ ಮೇಲಿರಿಸಿ ಅವರ ಭಾವೀ ಜೀವನ ಉಜ್ವಲಗೊಳ್ಳುವಂತೆ ಹಿರಿಯರು ಮಾಡಲಿ ಎಂಬ ಸದಾಶಯದಿಂದ ದೇಶ ಸ್ವತಂತ್ರಗೊಂಡಾದ ಮೇಲೆ ಮೊದಲ ಪ್ರಧಾನಿಯಾದ ಪಂಡಿತ್ ಜವಾಹರಲಾಲ್ ನೆಹರು ತಮ್ಮ ಜನ್ಮ ದಿನವನ್ನು ದೇಶದ ಜನತೆ ಆಚರಿಸಬೇಕೆಂದು ಯೋಚಿಸಿದಾಗ ನೆಹರು ಆ ದಿನವನ್ನು ಮಕ್ಕಳ ದಿನಾಚರಣೆಯನ್ನಾಗಿ ಆಚರಿಸಬೇಕೆಂದು ಬಹು ರಚನಾತ್ಮಕವಾದ ಸಲಹೆಯನ್ನು ದೇಶದ ಮುಂದೆ ಇಟ್ಟರು. ದೇಶ ಈ ಸಲಹೆಯನ್ನು ಬಹು ಪ್ರೀತಿಯಿಂದ ಸ್ವೀಕರಿಸಿತು. ಇದು ಭಾರತ ದೇಶಕ್ಕೆ ಸ್ವಾತಂತ್ರ್ಯ ಬಂದ ಎರಡನೆ ವರ್ಷದಲ್ಲಿ ನಡೆದ ಘಟನೆ. ಅದು ೧೯೪೯ ನೆ ಇಸವಿ ನವಂಬರ್೧೪ ರಂದು. ಅಂದಿನಿಂದ ಏಕ ಪ್ರಕಾರವಾಗಿ ಭಾರತ ದೇಶವು ಮಕ್ಕಳ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಿಕೊಂಡು ಬರುತ್ತಿದೆ. ಇಲ್ಲಿಗೆ ಆ ಆಚರಣೆಗೆ ೫೯ ವರ್ಷಗಳಾದವು. ವಿಶ್ವದ ಯಾವುದೇ ದೇಶದ ಪ್ರಧಾನಿಯ ಜನ್ಮದಿನವನ್ನು ಆ ದೇಶದ ಮಕ್ಕಳ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿಲ್ಲ. ಇದು ನಮ್ಮ ದೇಶದ ವಿಶಿಷ್ಟತೆಯಾಗಿದೆ. ಆದುದರಿಂದ ಇದು ಭಾರತೀಯರ ಹೆಮ್ಮೆಯ ಸಂಗತಿಯೂ ಹೌದು.

ಆನಂತರ ೧೦ವರ್ಷಗಳ ತರುವಾಯ ೧೯೫೯ ರಲ್ಲಿ ವಿಶ್ವರಾಷ್ಟ್ರ ಸಂಸ್ಥೆಯ ಸಾಮಾನ್ಯ ಸಭೆಯು "ಮಕ್ಕಳ ಹಕ್ಕಗಳ ಘೋಷಣೆ" ಎಂಬುದನ್ನು ಅಂಗೀಕರಿಸಿತು ಇದಕ್ಕೆ ಕಾರಣವೆನೆಂದರೇ ಯಾವುದೇ ಮಗು ಒಂದು ದೇಶದ ಅತ್ಯಂತ ಅಮೂಲ್ಯವಾದ ಸಂಪನ್ಮೂಲವಾಗಿದೆ. ಬಲಿಷ್ಠ, ಆರೋಗ್ಯವುಳ್ಳ ಮತ್ತು ಮಾನಸಿಕವಾಗಿ ಚುರುಕಾಗಿರುವ ಮಗು ಉಪಯುಕ್ತವೂ ಮತ್ತು ಫಲಪ್ರದವೂ ಆದ ನಾಗರೀಕನಾಗಿ ಬೆಳೆಯುತ್ತದೆ ಎಂಬ ತಿಳುವಳಿಕೆ.

ನೆಹರು ಸ್ವತಃ ತಮ್ಮ ಬಾಲ್ಯವನ್ನು ಸಂತೋಷದಲ್ಲಿ ಆಟಪಾಠಗಳ ಸಂಭ್ರಮದಲ್ಲಿ, ಪುಸ್ತಕಗಳ ಲೋಕದಲ್ಲಿ, ಹಿರಿಯರ ಸಹವಾಸದಲ್ಲಿ ಕಳೆದಿದ್ದರು. ಓದುವ ಹವ್ಯಾಸವನ್ನು ಬಾಲಕನಿದ್ದಾಗಲೆ ಬೆಳೆಸಿಕೊಂಡಿದ್ದರು. ಮುಂದೆ ಅವರು ದೊಡ್ಡವರಾದಂತೆ ಅವರ ಜೀವನದಲ್ಲಿ ಅನೇಕ ಬಗೆಯ ಮಾರ್ಪಾಡುಗಳಾದರೂ ಪುಸ್ತಕ ಓದುವ ಅವರ ಅಭಿರುಚಿ ಮಾತ್ರ ಸ್ಥಿರವಾಗಿ ಉಳಿದಿತ್ತು. ಆದ್ದರಿಂದಲೆ ನೆಹರು ಸುಂದರವಾದ ಭಾಷಾಶೈಲಿಯನ್ನೂ, ಉದಾತ್ತವಾದ ವಿಚಾರಗಳನ್ನೂ,

ವಿಶ್ವಶಾಂತಿಪ್ರಿಯತೆಯನ್ನೂ ಹೊಂದಲು ಸಾಧ್ಯವಾಗಿತ್ತು. ನೆಹರು ರಾಷ್ಟ್ರಕವಿ ರವೀಂದ್ರನಾಥ್ ಠಾಗೋರ್‌ರ ರಾಷ್ಟ್ರಗೀತೆಯ ಆಶಯದಂತೆ ಭಾರತ ದೇಶದ ಮಕ್ಕಳ ಮನಸ್ಸು ನಿರ್ಭೀತವಾಗಿರಬೇಕೆಂದೂ, ಜಡ ಸಂಪ್ರದಾಯದ ಮರಳು ಬೀಳಿನಲ್ಲಿ ಇಂಗಬಾರದೆಂದೂ ಬಯಸಿದ್ದರು. ನೆಹರು ಕಾರಾಗೃಹದಲ್ಲಿ ಇದ್ದರೂ ಸಹ ತಮ್ಮ ಅಧ್ಯಯನಶೀಲತೆಯ ಬಲದಿಂದಾಗಿ ತಮ್ಮ ಆತ್ಮಚರಿತ್ರೆಯನ್ನೂ, ವಿಶ್ವ ಇತಿಹಾಸದ ನೋಟಗಳೆಂಬ ಪುಸ್ತಕವನ್ನೂ ಬರೆಯಲು ಸಾಧ್ಯವಾಗಿತ್ತು. ನೆಹರು ಬಾಲಕರಾಗಿದ್ದಾಗ ಅಲಹಾಬಾದಿನ ತಮ್ಮ ಆನಂದಭವನದ ವಿಶಾಲ ತೋಟದಲ್ಲಿ ಸಂತೋಷವಾಗಿ ಆಡಿದ್ದೂ, ಅಲ್ಲಿದ್ದ ಕಲ್ಯಾಣಿಯಲ್ಲಿ ಹೊತ್ತುಗೊತ್ತಿಲ್ಲದೆ ಈಜಾಡಿದ್ದೂ ತುಂಟಾಟ ಮಾಡಿದ್ದೂ, ಅವರ ಮನಸ್ಸಿನ ಮೇಲೆ ಬಹು ಅಚ್ಚಳಿಯದೆ ಉಳಿದಿತ್ತು. ಈ ಬಾಲಕ್ರೀಡೆಗಳು ನಡೆದದ್ದು ೧೮೯೯ ರಲ್ಲಿ. ಆಗ ನೆಹರುರವರಿಗೆ ೧೦ ವರ್ಷ ವಯಸ್ಸು. ಮುಂದೆ ೧೯೪೯ ರಲ್ಲಿ ಸುಪ್ರಸಿದ್ಧ "ಶಂಕರ್ಸ್ ವೀಕ್ಲಿ" ಎಂಬ ವ್ಯಂಗ್ಯಚಿತ್ರಗಳ ಪತ್ರಿಕೆಯು ನೆಹರೂರ ಜನ್ಮದಿನದ ಸ್ಮರಣೆಗಾಗಿ ವಿಶೇಷ ಸಂಚಿಕೆಯನ್ನು ಪ್ರಕಟಿಸಿದ್ದಾಗ ಆ ಸಂಚಿಕೆಗೆ ನೆಹರು ಕಳುಹಿಸಿದ್ದ ಸಂದೇಶದಲ್ಲಿ ಅವರು ಬರೆದಿರುವ ಈ ಮಾತುಗಳನ್ನು ಓದಿದರೆ ನೆಹರುರವರು ಪ್ರಕೃತಿ ಮತ್ತು ಹೂವು ಮತ್ತು ಪಕ್ಷಿಗಳ ಬಗ್ಗೆ ಬೆಳೆಸಿಕೊಂಡಿದ್ದ ಪ್ರೀತಿಯನ್ನು ೫೦ ವರ್ಷಗಳ ನಂತರವೂ ಅಂದಿನ ಭಾರತೀಯ ಮಕ್ಕಳೊಂದಿಗೆ ಹಂಚಿಕೊಂಡದ್ದು, ನೆಹರು ತಮ್ಮ ಎಲ್ಲ ಗುರುತರ ಜವಾಬ್ದಾರಿ ಮತ್ತು ಬಿಡುವಿಲ್ಲದ ಕೆಲಸದ ಮಧ್ಯೆಯೂ ಮಕ್ಕಳ ಬಗ್ಗೆ ಎಷ್ಟೊಂದು ಆಶಾಭಾವನೆ ಇಟ್ಟುಕೊಂಡಿದ್ದರೆಂಬುದು ಕಂಡು ಬರುತ್ತದೆ. ನೆಹರೂರ ಆ ಸಂದೇಶ ಹಿಗಿತ್ತು, "ನೀನು ನನ್ನ ಬಳಿಯಿದ್ದರೆ ನಮ್ಮ ಈ ಸುಂದರ ಜಗತ್ತಿನ ಬಗ್ಗೆ, ಹೂವುಗಳು ಮತ್ತು ಮರಗಳು ಮತ್ತು ಪ್ರಾಣಿಗಳು ಮತ್ತು ನಕ್ಷತ್ರಗಳು ಮತ್ತು ಪರ್ವತಗಳು ಮತ್ತು ಹಿಮನದಿಗಳ ಬಗ್ಗೆ ಹಾಗೂ ಈ ಪ್ರಪಂಚದಲ್ಲಿ ನಮ್ಮನ್ನು ಸುತ್ತುವರೆದಿರುವ ಇತರ ಅದ್ಭುತವಾದ ವಸ್ತುಗಳ ಬಗ್ಗೆ ನಿನ್ನೊಂದಿಗೆ ಮಾತನಾಡಲು ಬಹು ಇಷ್ಟಪಡುತ್ತೇನೆ. ನಮ್ಮ ಸುತ್ತಲೆಲ್ಲ ಸೌಂದರ್ಯವೇ, ಸೌಂದರ್ಯವಿದೆ. ಆದಾಗ್ಯೂ ದೊಡ್ಡವರಾದ ನಾವು ಅವೆಲ್ಲವನ್ನೂ ಮರೆತು ನಮ್ಮ-ನಮ್ಮ ಕಛೇರಿಗಳಲ್ಲಿ ನಮ್ಮನ್ನು ನಾವು ಮರೆಯುತ್ತೇವೆ ಮತ್ತು ನಾವು ಯಾವುದೋ ಬಹು ಮಹತ್ವದ ಕೆಲಸವನ್ನು ಮಾಡುತ್ತಿದ್ದೇವೆಂಬುದಾಗಿ ಕಲ್ಪಿಸಿಕೊಳ್ಳುತ್ತೇವೆ.

ನೀನು ಹೆಚ್ಚು ವಿವೇಚನಾಶಾಲಿಯಾಗುವಿಯೆಂದೂ, ನಿನ್ನನ್ನು ಸುತ್ತುವರೆದಿರುವ ಸೌಂದರ್ಯ ಮತ್ತು ಜೀವನದ ಬಗ್ಗೆ ಕಣ್ಣುಗಳನ್ನೂ, ಕಿವಿಗಳನ್ನೂ ತೆರೆದಿಡುವಿಯೆಂದೂ ಆಶಿಸುತ್ತೇನೆ. ನೀನು ಹೂಗಳನ್ನು ಅವುಗಳ ಹೆಸರಿನಿಂದ ಗುರ್ತಿಸಬಲ್ಲೆಯಾ? ಹಕ್ಕಿಗಳನ್ನು ಅವುಗಳ ಹೆಸರಿನಿಂದ ಗುರ್ತಿಸಬಲ್ಲೆಯಾ! ಪ್ರೀತಿಯಿಂದಲೂ, ಸ್ನೇಹದಿಂದಲೂ ನೀನು ಅವುಗಳ ಬಳಿಗೆ ಹೋದರೆ ಅವುಗಳನ್ನು

ನನ್ನ ಸ್ನೇಹಿತರನ್ನಾಗಿ ಮಾಡಿಕೊಳ್ಳುವುದು ಎಷ್ಟೊಂದು ಸುಲಭ! ಬಹಳ ಹಿಂದೆ ನೀನು ಅನೇಕ ಕಿನ್ನರರ ಕಥೆಗಳನ್ನು ಓದಿರಬಹುದು. ಈ ಮೊದಲೆಂದೂ ಹೇಳದೆ ಇದ್ದ ಬಹು ಸಾಹಸದ, ಬಹು ದೊಡ್ಡ ಕಿನ್ನರರ ಕಥೆಯಾಗಿದೆ ಈ ಪ್ರಪಂಚ. ವಿಶ್ವದಲ್ಲಿಯ ಜೀವನ ಮತ್ತು ಸೌಂದರ್ಯವನ್ನು ನೋಡುವಕಣ್ಣು, ಕೇಳುವಕಿವಿ ಮತ್ತು ತೆರೆಯುವ ಮನಸ್ಸನ್ನು ಮಾತ್ರ ನಾವು ಹೊಂದಿರಬೇಕು." ನೆಹರೂ ಮಕ್ಕಳನ್ನು ಬಹುವಾಗಿ ಪ್ರೀತಿಸುತ್ತಿದ್ದರು ಮತ್ತು ಮಕ್ಕಳು ಅವರನ್ನು "ಚಾಚಾ" ಎಂದು ಪ್ರೀತಿಯಿಂದ ಕರೆಯುತ್ತಿದ್ದರು. ನೆಹರು ತಮ್ಮ ಮಗಳು ಇಂದಿರಾಳನ್ನು "ಪ್ರಿಯದರ್ಶಿನಿ" ಎಂದು ಕರೆದರಲ್ಲದೆ ತಾವು ಕಾರಾಗೃಹದಲ್ಲಿದ್ದಾಗ ಮಗಳಿಗೆ ವಿಶ್ವದ ಇತಿಹಾಸವನ್ನು ಪರಿಚಯ ಮಾಡಿಕೊಡುವ ಪತ್ರಗಳನ್ನು ಬರೆದರು. ಎಷ್ಟು ಜನ ತಂದೆ ಹೀಗೆ ತಮ್ಮ ಮಕ್ಕಳಿಗೆ ತಮ್ಮ ಸುತ್ತಲಿನ ಪ್ರಪಂಚವನ್ನು ಪರಿಚಯಮಾಡಿಕೊಡುತ್ತಾರೆ? ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವ ವಿಷಯದಲ್ಲಿ ನೆಹರು ಅಸಾಧಾರಣ ಆಸಕ್ತಿಯನ್ನು ಹೊಂದಿದ್ದರು. ಆದರೆ ಈಗಿನ ಪರಿಸ್ಥಿತಿಯೇನಿದೆ? ವಿಶ್ವದ ಎಲ್ಲ ದೇಶಗಳಲ್ಲಿಯೂ ಮಕ್ಕಳು ಶೋಷಿತರಾಗಿದ್ದಾರೆ, ಲೈಂಗಿಕ ಕಿರುಕುಳಕ್ಕೆ ತುತ್ತಾಗಿದ್ದಾರೆ. ವಿಕಾಸದ ಅವಕಾಶಗಳಿಂದ ವಂಚಿತರಾಗಿದ್ದಾರೆ. ಬಾಲ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಮಕ್ಕಳು ಇಂದು ಪಡೆಯುತ್ತಿರುವ ಶಿಕ್ಷಣ ಆತ್ಮಶಿಕ್ಷಣವಿದೂರವಾಗಿದೆ. ಮಕ್ಕಳನ್ನು ಹೆಚ್ಚು ಹೆಚ್ಚು ಭೌತಿಕವಾದಕ್ಕೆ ತಳ್ಳುತ್ತಿದೆ. ಮಕ್ಕಳಲ್ಲಿ ಅಗತ್ಯಕ್ಕಿಂತ ಹೆಚ್ಚು ಮಾಹಿತಿಯನ್ನು ತುಂಬಲಾಗುತ್ತಿದೆ. ಅನಾವಶ್ಯಕವಾಗಿ ಅವರಲ್ಲಿ ಸ್ಪರ್ಧಾಭಾವನೆಯನ್ನು ಉದ್ದೀಪನಗೊಳಿಸಲಾಗುತ್ತಿದೆ. ಅವರ ಮನಸ್ಸಿನಲ್ಲಿ ಜಾತಿ ಭೇದದ, ಧರ್ಮಭೇದದ ವಿಚಾರವನ್ನು ಬಿತ್ತಲಾಗುತ್ತಿದೆ. ವಿಶ್ವದ ಮಕ್ಕಳಿಗೆ ಯಾವ ಜಾತಿಯೂ ಇಲ್ಲ, ಧರ್ಮವೂ ಇಲ್ಲ, ಅವರು ಮಾನವತೆಯ ಕುಡಿಯಷ್ಟೆ. ಆದರೆ ಅವರನ್ನು ಎಲ್ಲ ಪ್ರಕಾರದ ಭೇದಗಳಿಗೆ ಗುರಿಪಡಿಸಲಾಗುತ್ತಿದೆ. ಹೆಣ್ಣು ಮಕ್ಕಳ ಸ್ಥಿತಿಯಂತೂ ಇನ್ನೂ ಚಿಂತಾಜನಕವಾಗಿದೆ. ಮಕ್ಕಳನ್ನು ಆವರಿಸಿಕೊಳ್ಳುತ್ತಿರುವ ಸಾಮಾಜಿಕ ಪಿಡುಗುಗಳಿಂದ ಅವರನ್ನು ಹೇಗೆ ರಕ್ಷಿಸಬೇಕೆಂಬುದೆ ಇಂದಿನ ಮನುಕುಲದ ಸವಾಲಾಗಿದೆ.ಮನುಕುಲದ ಒಳ್ಳೆಯ ಭವಿಷ್ಯ ಯಾವುದೇ ಭೌತಿಕಸಾಧನೆಗಳಲ್ಲಾಗಲಿ, ವಸ್ತುಗಳಲ್ಲಾಗಲಿ ಇಲ್ಲ. ಅಣೆಕಟ್ಟು, ಕಾರ್ಖಾನೆ, ಅಣುಸ್ಥಾವರಗಳು, ಬಗೆಬಗೆಯ ತಂತ್ರಜ್ಞಾನಗಳಲ್ಲಿ ಇಲ್ಲ. ಗುಡಿಗಳಲ್ಲಿ, ಮಸೀದಿಗಳಲ್ಲಿ, ಮಠಗಳಲ್ಲಿ, ಚರ್ಚ್‌ಗಳಲ್ಲಿ ಇಲ್ಲ. ಶ್ರೀಮಂತಿಕೆಯ ಅಟ್ಟಹಾಸವನ್ನು ಮೆರೆಯುತ್ತಿರುವ ವಿಶ್ವವಿದ್ಯಾನಿಲಯಗಳಲ್ಲಿ, ದಿವ್ಯಭವ್ಯ ಶಿಕ್ಷಣ ಸಂಸ್ಥೆಯ ಕಟ್ಟಡಗಳಲ್ಲಿ ಇಲ್ಲ. ಮನುಕುಲದ ಒಳ್ಳೆಯ ಭವಿಷ್ಯ ಇರುವುದು ಮಕ್ಕಳ ಮುಷ್ಠಿಯಲ್ಲಿ. ಆ ಮಕ್ಕಳ ಮುಷ್ಠಿಯಲ್ಲಿ ಎಂಥ ಶಕ್ತಿ ಇದೆಯೆಂಬುದರ ಅರಿವು ಇನ್ನೂ ನಮಗೆ ಆಗಬೇಕಿದೆ. ಮಕ್ಕಳು ಹುಟ್ಟುವಾಗ ಮುಷ್ಠಿಕೈಯಿಂದಲೆ ಹುಟ್ಟುತ್ತವೆ. ಆ ಮುಷ್ಠಿಯಲ್ಲಿ ಯಾವುದೊ ಅಮೂಲ್ಯವಾದ ವಸ್ತು ಇದೆಯೇನೊ ಎಂಬಂತೆ ಮಕ್ಕಳು ಹುಟ್ಟುವಾಗಲೆ ತಮ್ಮ

ಕಿರು, ಎಳೆ ಐದು ಬೆರಳುಗಳಿಂದ ಬಿಗಿಮುಷ್ಠಿಯನ್ನು ಮಾಡಿಕೊಂಡಿರುತ್ತವೆ. ಮುದ್ದಿಗಾಗಿ ಆ ಬೆರಳುಗಳನ್ನು ಬಿಡಿಸಿದರೆ ಪುನಃ ಮುಷ್ಠಿ ಕಟ್ಟುತ್ತವೆ. ಹಾಗೆ ಮುಷ್ಠಿ ಕಟ್ಟಿಕೊಂಡಾಗ ಮಕ್ಕಳಿಗೆ ಅದೇನೊ ಸುರಕ್ಷತತೆಯ ಅನುಭವ ಆಗುತ್ತಿರಬೇಕು. ಆ ಮುಷ್ಠಿ ಬರಿದಾಗಿದ್ದರೂ ಅದರಲ್ಲಿ ಯಾವುದೊ ಕಾಣದ ಒಂದು ಶಕ್ತಿ ಇರುತ್ತದೆಂಬುದರಲ್ಲಿ ಸಂಶಯವಿಲ್ಲ. ಮಗು ದೊಡ್ಡದಾಗುತ್ತಾ ಬಂದಂತೆ ಆ ಮುಷ್ಠಿಯ ಬಲದಿಂದಲೆ ಜೀವನದಲ್ಲಿ ಏನೆಲ್ಲವನ್ನೂ ಸಾಧಿಸುತ್ತದೆ. ಮಗುವಿನಲ್ಲಿಯ ಧೀಮಂತಿಕೆ ಮತ್ತು ಧೀರತೆ ಪ್ರಕಟಗೊಳ್ಳುವುದು ಈ ಮುಷ್ಠಿಯ ಬಲದಿಂದಲೆ. ಯಾವ ಮಗುವಿನ ಮುಷ್ಠಿ ದುರ್ಬಲವಾಗಿರುತ್ತದೊ ಆ ಮಗು ಜೀವನದಲ್ಲಿ ಸೋಲನ್ನನ್ನುಭವಿಸುತ್ತದೆ. ಮಗುವಿನ ಮುಷ್ಠಿಯಲ್ಲಿ ಲೇಖನಿ ಇಟ್ಟರೆ ಮಗು ಲೇಖಕನಾಗಬಹುದು. ತನ್ನ ಲೇಖನಿಯಿಂದ ಸಮಾಜವನ್ನು ತಿದ್ದಬಹುದು ಉದಾಹರಣೆಗೆ ಗಾಂಧಿ ಮತ್ತು ಅಂಬೆಡ್ಕರ್. ಇಂಥ ವ್ಯಕ್ತಿಗಳು ಇನ್ನೂ ನೂರಾರು ಇದ್ದಾರೆ. ಅದೇ ಮುಷ್ಠಿಗೆ ಕೋವಿಯನ್ನೂ ಕೊಡಬಹುದು ಆಗ ಮಗು ಭಯೋತ್ಪಾದಕನಾಗಬಹುದು. ಅನೇಕ ಅಮಾಯಕರ ಪ್ರಾಣಹರಣ ಮಾಡಬಹುದು.

ಆದ್ದರಿಂದ ಮನುಕುಲದ ಭವಿಷ್ಯ ನಿಶ್ಚಯವಾಗಿಯೂ ಮಕ್ಕಳ ಮುಷ್ಠಿಯಲ್ಲಿದೆ. ಇಂದಿನ ಮಕ್ಕಳೆ ನಾಳಿನ ತರುಣರೂ ಪ್ರಜೆಗಳೂ ಆಗಿರುವುದರಿಂದ ಅವರೇ ಶ್ರೀಕೃಷ್ಣನಂತೆ ರೂಪ ತಳೆದು ಧರ್ಮಗ್ಲಾನಿಯತ್ತ ಸಾಗಿರುವ ಇಂದಿನ ಸಮಾಜವನ್ನು ಉದ್ಧರಿಸಬಹುದು. ಪೌರಾಣಿಕ ಕತೆಯಂತೆ ವಿಶ್ವದಲ್ಲಿ ಪ್ರಳಯವಾದಾಗ ಬಾಲಕ ಕೃಷ್ಣನೊಬ್ಬನೆ ಆಲದ ಎಲೆಯ ಮೇಲೆ ಬದುಕುಳಿದು ಮಲಗಿ ತೇಲುತ್ತಿದ್ದನಂತೆ, ಅದೇ ರೀತಿ ಇಂದಿನ ವಿಶ್ವದ ಹಾಲಾಹಲದಲ್ಲಿ ಉಳಿದು ಬರುವ ಶಕ್ತಿ ಯಾರಿಗಾದರೂ ಇದ್ದರೆ ಅದು ಮಕ್ಕಳಿಗೆ ಮಾತ್ರ.

ಈ ಸಂದರ್ಭದಲ್ಲಿ ಪರ್ಶಿಯನ್ ಕವಿ ಖಲೀಲ್ ಗಿಬ್ರಾನ್ ಮಕ್ಕಳನ್ನು ಕುರಿತು ಹೇಳಿದ ಈ ಕೆಳಗಿನ ಮಾತು ಮನುಕುಲದ ಭವಿಷ್ಯ ಮಕ್ಕಳ ಮುಷ್ಠಿಯಲ್ಲಿದೆ ಎಂಬ ಸತ್ಯ ಸಂಗತಿಯನ್ನು ನಿಚ್ಚಳವಾಗಿ ಸಾರುತ್ತದೆ. “ನಿಮ್ಮ ಮಕ್ಕಳು ನಿಮ್ಮ ಮಕ್ಕಳಲ್ಲ! ಬಾಳಬೇಕೆಂಬ ಜೀವನದ ಹಂಬಲದ ಮಕ್ಕಳವರು. ನಿಮ್ಮ ಮೂಲಕ ಅವರು ಬಂದಿರಬಹುದು ಆದರೆ ನಿಮ್ಮಿಂದ ಬಂದವರಲ್ಲ. ಅವರು ನಿಮ್ಮೊಂದಿಗಿದ್ದರೂ ಅವರು ನಿಮ್ಮವರಲ್ಲ. ನೀವು ಅವರಿಗೆ ನಿಮ್ಮ ಪ್ರೀತಿಯನ್ನು ಕೊಡಿ. ಆದರೆ ನಿಮ್ಮವಿಚಾರವನ್ನಲ್ಲ” ಏಕೆಂದರೆ ಅವರಿಗೆ ಅವರದೇ ಆದ ವಿಚಾರಗಳಿವೆ. ನೀವು ಅವರಂತೆ ಆಗಲು ಪ್ರಯತ್ನಿಸಬಹುದು. ಆದರೆ ಅವರನ್ನು ನಿಮ್ಮಂತೆ ಮಾಡಲು ಪ್ರಯತ್ನಿಸಬೇಡಿ ಏಕೆಂದರೆ ಜೀವನವು ಭೂತಕಾಲದ ಕಡೆ ಮುಖ ಮಾಡಿಲ್ಲ ಮತ್ತು ಅದು ಸ್ಥಿರವಲ್ಲ.

* * *

ಕನ್ನಡದ ಅಭಿವೃದ್ಧಿ ಹೇಗೆ?

– ಕೆ.ವಿ.ತಿರುಮಲೇಶ್.

ಕನ್ನಡ ಭಾಷೆಯ ರಕ್ಷಣೆ ಮತ್ತು ಅಭಿವೃದ್ಧಿಯ ಕುರಿತಾಗಿ ಈಗ ವ್ಯಾಪಕವಾದ ಅರಿವು ಮೂಡುತ್ತಿರುವುದು ಹಾಗೂ ಹಲವು ಬುದ್ಧಿಜೀವಿಗಳು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿರುವುದು ಸ್ವಾಗತಾರ್ಹ. ಕನ್ನಡ ಚಳವಳಿ ಇಂದು ನಿನ್ನೆಯದೇನಲ್ಲ. ಹಲವು ರೀತಿಯ ಚಳವಳಿಗಳು ಹಲವು ಧ್ವಜಗಳ ಕೆಳಗೆ ಬಂದು ಹೋಗಿವೆ. ಮತ್ತು ತಮ್ಮ ಕೈಲಾದ ಕೊಡುಗೆಗಳನ್ನೂ ನೀಡಿವೆ. ಆದರೂ ಈ ಚಳವಳಿಗಳು ಎಲ್ಲಾ ಮಂದಿಯನ್ನೂ ಒಳಗೊಳ್ಳುವುದರಲ್ಲಿ ಯಶಸ್ವಿಯಾಗಿವೆಯೇ ಎನ್ನುವುದು ಸಂದೇಹಕರ. ಯಾವುದೇ ಚಳವಳಿ ಜನಸಮೂಹದ ಬೆಂಬಲವಿಲ್ಲದೆ ಯಶಸ್ವಿಯಾಗುವುದು ಸಾಧ್ಯವಿಲ್ಲ. ಎಲ್ಲಾ ಕನ್ನಡಿಗರೂ ಕನ್ನಡ ಭಾಷೆಯ ರಕ್ಷಣೆ ಮತ್ತು ಅಭಿವೃದ್ಧಿಯಲ್ಲಿ ಭಾಗವಹಿಸುವುದು ಸಾಧ್ಯವಿಲ್ಲ. ಎಲ್ಲರೂ ಭಾಗವಹಿಸುವುದು ಇಂದಿನ ಅಗತ್ಯವಾಗಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಹೀಗಾಗಬೇಕಾದರೆ, ಜನ ಒಂದು ರೀತಿ ಚಿಂತಿಸುವುದು, ಬುದ್ಧಿಜೀವಿಗಳು ಇನ್ನೊಂದು ರೀತಿ ಚಿಂತಿಸುವುದು ಎನ್ನುವ ಪರಿಸ್ಥಿತಿ ಉಂಟಾಗಬಾರದು, ಭಾಷೆಯ ಹಲವು ಆಯಾಮಗಳಲ್ಲಿ ಜನಹಿತ ಬಹುಮುಖ್ಯವಾದ ಘಟಕವಾದ್ದರಿಂದ ಜನಹಿತವನ್ನು ಕಾಪಾಡಿಕೊಂಡೇ ಕನ್ನಡದ ಕೆಲಸ ನಡೆಯಬೇಕಾಗಿದೆ. ಕನ್ನಡದ ಚಳವಳಿಗಾರರು ಹಮ್ಮಿಕೊಳ್ಳುವ ಯಾವುದೇ ಕಾರ್ಯಕ್ರಮಗಳೂ ಜನರಿಗೆ ಹಿತಕರವಾಗಿರಬೇಕು ಮಾತ್ರವಲ್ಲ, ಜನ ನಂಬುವಂತೆಯೂ ಆಗಿರಬೇಕು.

ಕನ್ನಡ ಅಂಕೆಗಳ ವಿಚಾರ ತೆಗೆದುಕೊಳ್ಳೋಣ, ಕನ್ನಡಿಗರೆಲ್ಲಾ ಕನ್ನಡ ಅಂಕೆಗಳನ್ನು ಕಲಿಯಬೇಕು ಹಾಗೂ ಉಪಯೋಗಿಸಬೇಕು ಎಂಬುದರಲ್ಲಿ ಸಂದೇಹವಿಲ್ಲ. ಎಲ್ಲಾ ಪಠ್ಯಪುಸ್ತಕಗಳಲ್ಲೂ ಇದಕ್ಕೆ ಅನುವಿರತಕ್ಕದ್ದು. ಆದರೂ ಈಗ ಜನ ಬಳಸುತ್ತಿರುವಂಥಾ 'ಇಂಗ್ಲೀಷ್' ಅಂಕೆಗಳಿರುವಲ್ಲೆಲ್ಲಾ ಕನ್ನಡ ಅಂಕೆಗಳನ್ನೇ ಬಳಸಬೇಕು ಎಂದರೆ ಅದಕ್ಕೆ ಜನಬೆಂಬಲ ಸಿಗುವುದು ಕಷ್ಟವಾಗುತ್ತದೆ. ನಾವು 'ಇಂಗ್ಲೀಷ್' ಎಂದು ತಿಳಿದುಕೊಂಡಿರುವ ಅಂಕೆಗಳು ಇಂಗ್ಲೀಷ್ ಅಲ್ಲವೇ ಅಲ್ಲ! ಇವು ಮೂಲತಃ ಅರಬಿಕ್. ಸೊನ್ನೆ ಭಾರತದಿಂದಲೇ ಅರೇಬಿಯಾಕ್ಕೆ ಹೋಯಿತು ಎನ್ನುತ್ತಾರೆ.

ಅದೇನೆಯಿದ್ದರೂ ಈ ಹೊತ್ತು ಈ 'ಇಂಗ್ಲೀಷ್' ಅಂಕೆಗಳು ನಮ್ಮದೇ ಆಗಿವೆ. ಹಾಗೂ ಈ ಅಂಕೆಗಳನ್ನು ಉಪಯೋಗಿಸಿದ ಮಾತ್ರಕ್ಕೆ ನಮ್ಮ ಕನ್ನಡತನವೇನೂ ನಷ್ಟವಾಗುವುದಿಲ್ಲ. ಆದರೂ ಕನ್ನಡ ಅಂಕೆಗಳನ್ನು ಕೂಡಾ

ನಾವು ಬಿಡಬಾರದು. ಪುಸ್ತಕಗಳ ಪುಟಸಂಖ್ಯೆ ಖಾಸಗೀ ಪತ್ರಗಳ ತಾರೀಖು, ಅಂಚೆ ಪಿನ್‌ಕೋಡು ಮುಂತಾದ ಕಡೆ ಕನ್ನಡ ಅಂಕೆಗಳನ್ನು ಇಟ್ಟುಕೊಂಡು ಸಾರ್ವಜನಿಕ ಜಾಗಗಳಲ್ಲಿ ಈಗ ನಾವು ಬಳಸುವ ಅಂಕೆಗಳನ್ನೇ ಮುಂದುವರೆಸುವುದು ಅಗತ್ಯ. ರೋಮನ್ ಅಂಕೆಗಳು ಈ ರೀತಿಯಾಗಿ ಸದ್ಯ ಕೆಲವು ಕಡೆ ಬಳಕೆಯಾಗುತ್ತಿರುವುದನ್ನು ಗಮನಿಸಬೇಕು. ಕನ್ನಡ ಚಳವಳಿಯ ಶಕ್ತಿ ವೃಥಾ ಪೋಲಾಗದೆ ಸರಿಯಾದ ಕಡೆ ಉಪಯೋಗವಾಗಬೇಕಾದರೆ ಯಾವುದು ಮುಖ್ಯ, ಯಾವುದು ಅಮುಖ್ಯ, ಯಾವುದು ಜನೋಪಯೋಗಿ, ಯಾವುದು ಜನವಿರೋಧಿ ಎನ್ನುವ ತಾರತಮ್ಯ, ವಿವೇಕ ಮೂಡುವುದು ಅಗತ್ಯವಾಗಿದೆ.

ಕೆಲವು ತಪ್ಪು ಕಲ್ಪನೆಗಳು ನಮ್ಮನ್ನು ದಿಕ್ಕೆಡಿಸುತ್ತಿವೆ. ಕನ್ನಡದ ಕೆಲಸ ದಿಢೀರಾಗಿ ಆಗುವುಂಥದು ಎಂಬ ಕಲ್ಪನೆ ತಪ್ಪು. ಕನ್ನಡದ ಕೆಲಸ ವ್ಯಾಪಕವಾಗಿಯೂ ನಿರಂತರವಾಗಿಯೂ ನಡೆಯಬೇಕಾದ್ದೇ ಹೊರತು ಒಮ್ಮೆ ಮಾಡಿ. ಕೈಕಟ್ಟಿ ಕೂಡುವಂಥದಲ್ಲ. ಕನ್ನಡದ ಕೆಲಸವೆಂದರೆ ಅದೊಂದು ಜನಸಮೂಹದ ಚರಿತ್ರೆ, ಸಮಕಾಲೀನತೆ ಹಾಗೂ ಭವಿಷ್ಯ. ತಲೆಮಾರಿನಿಂದ ತಲೆಮಾರಿಗೆ ಹರಿದು ಬರಬೇಕಾದ ವಾಹಿನಿ. ಆದ್ದರಿಂದ ಇದನ್ನು ಸಮಚಿತ್ತದಿಂದಲೂ ಕರ್ತವ್ಯ ನಿಷ್ಠೆಯಿಂದಲೂ ಸಂತೋಷದಿಂದಲೂ ನಾವು ಮಾಡಬೇಕಾಗಿದೆ, ಒಂದು ಹೊರೆಯಾಗಿ ಅಲ್ಲ. ಎಲ್ಲಿ ಇದರ ಆರಂಭ, ಎಲ್ಲಿ ನಮ್ಮ ಪ್ರವೇಶ ಎಂದು ಯೋಚಿಸಿದರೆ ಅವು ಎಲ್ಲಾ ಕಡೆಯೂ ಇರುವಂತೆ ಅನಿಸುತ್ತದೆ. ಉದಾಹರಣೆಗೆ, ಜನಜೀವನದಲ್ಲಿ ಆಗುತ್ತಿರುವಂಥಾ ಬದಲಾವಣೆಗಳು, ಸಂಸ್ಕೃತಿಯ ಕುರಿತಾದ ನಮ್ಮ ಧೋರಣೆಗಳು, ನಮ್ಮ ಯುವ ಜನರ ಆಶೋತ್ತರಗಳು. ಆದ್ದರಿಂದ, ಕನ್ನಡದ ಚಳವಳಿಯೆಂದರೆ ಅದು ಎಲ್ಲರನ್ನೂ ಎಲ್ಲವನ್ನೂ ಒಳಗೊಳ್ಳುವ ಒಂದು ತತ್ವಜ್ಞಾನವಾಗಿ ಬೆಳೆಯಬೇಕಾಗಿದೆ. ಇದು ಎಲ್ಲರ ದೋಣಿಯೂ ಆಗಿರುವುದರಿಂದ ಒಬ್ಬನನ್ನು ಅಥವಾ ಒಂದು ಪಂಗಡವನ್ನು ತಳ್ಳಿ ಉಳಿದವರು ಮುಂದುವರೆಯುವಂತಿಲ್ಲ. ಎಲ್ಲಾ ವೈವಿಧ್ಯಗಳನ್ನೂ ಒಪ್ಪಿಕೊಂಡು ಎಲ್ಲರನ್ನೂ ಜತೆಯಲ್ಲಿ ತೆಗೆದುಕೊಳ್ಳುವ ಚಳವಳಿ ಮಾತ್ರವೇ ಭವಿಷ್ಯಕ್ಕೆ ಮುಖಾಮುಖಿಯಾಗುತ್ತದೆ. ಸಹಜವಾಗಿ ಇಂಥಾಕಡೆ ವೈರುಧ್ಯಗಳು ಕೂಡಾ ಇರುತ್ತವೆ.

ವ್ಯಕ್ತವಾಗಿ ಕಾಣಿಸುವಂಥ ನೆಲೆಯಲ್ಲಿ ಮಾತ್ರವೇ ಕನ್ನಡಕ್ಕೆ ಅಪಾಯ ಎನ್ನುವುದು ಇನ್ನೊಂದು ದೊಡ್ಡ ತಪ್ಪು ಕಲ್ಪನೆ, ಅಂಗಡಿ ಫಲಕ, ಬಸ್ಸು ನಂಬರ್ ಪ್ಲೇಟು ಮುಂತಾದವನ್ನು ಕನ್ನಡಕ್ಕೆ ಬದಲಿಸುವುದು- ಇವೆಲ್ಲ ಸಾಂಜ್ಞಿಕವಾಗಿ ಮುಖ್ಯವೇ ಹೊರತು ಆಳದಲ್ಲಲ್ಲ. ಕನ್ನಡಕ್ಕೆ ಈ ಹೊರಮಟ್ಟದ ಯಾವುದರಿಂದಲೂ ಅಪಾಯವಿಲ್ಲ. ಅಪಾಯವಿರುವ ಸ್ತರ ಸುಲಭವಾಗಿ ನಮ್ಮ ಗೋಚರಕ್ಕೆ ಬರುವಂಥದಲ್ಲವಾದ್ದರಿಂದ ಆ ಕುರಿತು ಮಾತಾಡುವುದು ಕಷ್ಟವಾಗುತ್ತದೆ. ಆದ್ದರಿಂದಲೇ ಜನಕ್ಕೆ ಇದರ ಅರಿವು ಮಾಡಿಕೊಡುವುದಾಗಲಿ ಅವರ ಬೆಂಬಲ

ಗಳಿಸುವುದಾಗಲಿ ಸುಲಭದ ಕಾರ್ಯವಾಗದೆ ಉಳಿದಿರುವುದು. ಆದರೂ ಈ ಕಾರಣಕ್ಕೇ ಸಮಸ್ಯೆಗಳನ್ನು ಅವುಗಳ ಗಂಭೀರ ನೆಲೆಯನ್ನು ಅರ್ಥಮಾಡಿಕೊಳ್ಳುವುದು ಅಗತ್ಯ.

ಇತರ ಭಾಷೆಗಳಿಂದ –ಮುಖ್ಯವಾಗಿ ಸಂಸ್ಕೃತ ಮತ್ತು ಇಂಗ್ಲೀಷ್‌ನಿಂದ ಕನ್ನಡಕ್ಕಿರುವ ಅಪಾಯವನ್ನು ಗಮನಿಸೋಣ. ಕನ್ನಡದ ಸ್ಥಾನವನ್ನು ಸಂಸ್ಕೃತ ಕಸಿದುಕೊಳ್ಳುವ ಅಪಾಯವನ್ನು ಗೋಕಾಕ ಚಳುವಳಿ ಯಶಸ್ವಿಯಾಗಿ ಎದುರಿಸಿದ್ದು ಕನ್ನಡದ ಅಗತ್ಯವಾಗಿದ್ದಿತು ಎನ್ನುವುದರಲ್ಲಿ ಸಂಶಯವಿಲ್ಲ. ಆದರೆ, ಉಳಿದಂತೆ ಸಂಸ್ಕೃತದಿಂದ ಕನ್ನಡಕ್ಕೆ ಸದ್ಯ ಯಾವ ಅಪಾಯವೂ ಉಳಿದಿಲ್ಲ. ಕನ್ನಡದ 'ಜೀರ್ಣಾಗ್ನಿ'ಯೆನ್ನಲೇ, ಕನ್ನಡವು ಸಂಸ್ಕೃತದೊಂದಿಗಿದ್ದ ತನ್ನ ಲಡಾಯಿಯನ್ನು ನೃಪತುಂಗನ ಕಾಲಕ್ಕೇ ಪರಿಹರಿಸಿಕೊಂಡಿದೆ. ಆ ಮೇಲೆ ಸಂಸ್ಕೃತವನ್ನು ತನ್ನ ಉಪಯೋಗಕ್ಕೆ ಬಳಸಿಕೊಳ್ಳುವ ತಾಕತ್ತನ್ನು ಪಡೆದುಕೊಂಡಿತ್ತು. ಸಂಸ್ಕೃತ ಈಗ ಕನ್ನಡದ ಜೀವಸೆಲೆಗಳಲ್ಲಿ ಒಂದಾಗಿದ್ದು ಕನ್ನಡ ಈ ಭಾಷೆಯನ್ನು ತನ್ನದೇ ಎಂಬ ರೀತಿಯಲ್ಲಿ ಸ್ವೀಕರಿಸಿದೆ. ಈ ಸಂಬಂಧವನ್ನು ಕೈಬಿಡದೆ ಮುಂದುವರಿಸಿಕೊಂಡು ಹೋಗುವುದು ಕನ್ನಡದ ದೃಷ್ಟಿಯಿಂದಲೆ ಒಳ್ಳೆಯದು, ಕರ್ನಾಟಕದಲ್ಲೊಂದು ಸಂಸ್ಕೃತ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಸೂಚನೆ ಬಂದಾಗ ಅದಕ್ಕೆ ವಿರುದ್ಧವಾಗಿ ಕೆಲವರಿಂದ ಬಂದ ಅಭಿಪ್ರಾಯವನ್ನು ಕನ್ನಡದ ಏಳಿಗೆಯ ದೃಷ್ಟಿಯಿಂದ ಸರಿಯಾದವಲ್ಲ, ಸಂಸ್ಕೃತ ಸದ್ಯ ಕನ್ನಡದಿಂದ ಸ್ವೀಕರಿಸುವುದೇನೋ ಇಲ್ಲ; ಆದರೆ ಕನ್ನಡ ಸಂಸ್ಕೃತದಿಂದ ಸ್ವೀಕರಿಸುವುದು ಬಹಳಷ್ಟಿದೆ. ವಿವೇಕಿಗಳಾದ ಮನುಷ್ಯರು ತಮ್ಮ ವಿರೋಧಿಗಳಿಂದಲೂ ಕೂಡ ತಮಗೆ ಬೇಕಾದನ್ನು ಪಡೆದುಕೊಳ್ಳಲು ತಯಾರಿರಬೇಕು. ಕನ್ನಡದ ಅಂಗಳದಲ್ಲೇ ಸಂಸ್ಕೃತ ವಿಶ್ವವಿದ್ಯಾಲಯವೊಂದು ಇರುವುದರಿಂದ ಕನ್ನಡಕ್ಕೇ ಉಪಯೋಗ.

ಇಂಗ್ಲೀಷ್‌ನ ಕುರಿತಾದ ನಮ್ಮ ಸಂಬಂಧ ಇಂದಿನ ದಿನಗಳಲ್ಲಿ ಇರುಸುಮುರುಸಿನದು ಎನ್ನುವುದರಲ್ಲಿ ಸಂದೇಹವಿಲ್ಲ. ಈ ಸಂಬಂಧವನ್ನು ರೂಪಿಸಿದ ಆರ್ಥಿಕ ಹಾಗೂ ಸಾಮಾಜಿಕ ಶಕ್ತಿಗಳು ಪೂರ್ತಿಯಾಗಿ ನಮ್ಮ ಕೈಯಲ್ಲಿ ಇಲ್ಲದಿರುವುದೇ ಈ ಇರುಸುಮುರುಸಿಗೆ ಕಾರಣ. ಇಂಗ್ಲೀಷ್‌ನ್ನು ನಾವು ಈ ಹೊತ್ತು ಬಿಡುವಂತಿಲ್ಲ, ಹಿಡಿಯುವಂತಿಲ್ಲ. ನಮ್ಮ ರಾಜಕೀಯ ಶಕ್ತಿ ಕೂಡಾ ಈ ದ್ವಂದ್ವದ ದವಡೆಯಲ್ಲಿ ಸಿಕ್ಕಿಬಿದ್ದಿದೆ. ಈ ಸಮಸ್ಯೆಯನ್ನು ನೇರವಾಗಿ ಎದುರಿಸುವುದು ಒಂದು ದಾರಿ–ಅನಂತಮೂರ್ತಿಯವರು ಈ ನಿಟ್ಟಿನಲ್ಲಿ ಈಗಾಗಲೇ ಸಾಕಷ್ಟು ಸಲಹೆಗಳನ್ನು ನೀಡಿದ್ದಾರೆ. ಆರಂಭದ ವಿದ್ಯಾಭ್ಯಾಸ ಮಾತೃಭಾಷೆಯಲ್ಲೇ ಆಗಬೇಕೆನ್ನುವುದು ಅವರ ಒಂದು ಸಲಹೆ, ಗಣಿತ, ವಿಜ್ಞಾನ, ತಂತ್ರವಿಜ್ಞಾನ ಮುಂತಾದ ವಿಷಯಗಳನ್ನು ಇಂಗ್ಲೀಷ್‌ನಲ್ಲೂ ಸಾಮಾಜಿಕ ಅಧ್ಯಯನ ವಿಷಯಗಳನ್ನು ಕನ್ನಡದಲ್ಲೂ ಕಲಿಸಬೇಕು ಎನ್ನುವುದು ಅವರ ಇನ್ನೊಂದು

ಸಲಹೆ. ಈ ಎರಡು ಸಲಹೆಗಳೂ ಗಂಭೀರ ಪರಿಗಣನೆಗೆ ಅರ್ಹವಾದುದೇ. ಇಂಗ್ಲೀಷ್‌ನ ಸಮಸ್ಯೆಗಳನ್ನು ಒರೆಯಾಗಿಯೂ ದೀರ್ಘಕಾಲಿಕವಾಗಿಯೂ ಎದುರಿಸುವುದು ಇನ್ನೊಂದು ವಿಧಾನ-ಕಷ್ಟಕರವಾದದ್ದು, ಆದರೆ ಇದೇ ಕೊನೆಗೂ ಕನ್ನಡವನ್ನು ಮೇಲೆತ್ತಲು ಸಹಕಾರಿಯಾಗುವಂಥದ್ದು. ಇಂಗ್ಲೀಷ್‌ನಲ್ಲಿ ಜನರಿಗೆ ಸಿಗುವಂತ ಜ್ಞಾನವಾಹಿನಿ ಕನ್ನಡದಲ್ಲೇ ಸಿಗುವುದು ಸಾಧ್ಯವಾದರೆ ಜನ ಯಾಕೆ ಇಂಗ್ಲೀಷ್‌ಗೆ ಮೊರೆಹೋಗಬೇಕು? ಆದರೆ ಅದು ಸಾಧ್ಯವೇ?

ಸಾಧ್ಯವಿಲ್ಲ ಎಂದು ಕೈ ಚೆಲ್ಲುವುದಕ್ಕಿಂತ, ಸಾಧ್ಯವಾಗಬೇಕಾದರೆ ಏನು ಮಾಡಬೇಕು ಎಂದು ಚಿಂತಿಸುವುದು ಒಳಿತು. ನಾವು ನಮ್ಮ ಇಂಗ್ಲೀಷ್ ಸಂಬಂಧವನ್ನು ಕನ್ನಡದ ಉಪಯೋಗಕ್ಕೆ ಬಳಸಿಕೊಳ್ಳುವುದು ಸಾಧ್ಯವೆನಿಸುವುದು. ಆದರೆ, ಜ್ಞಾನಮೂಲ ಇಂಗ್ಲೀಷ್‌ನಲ್ಲಿ ಮಾತ್ರವೇ ಇರುವುದು ಎಂಬ ಮೌಢ್ಯವನ್ನೂ ನಾವು ಕೈಬಿಡಬೇಕಾಗಿದೆ. ಯೂರೋಪಿನ ಭಾಷೆಗಳನ್ನು ಗಮನಿಸಿದರೆ, ಇಂಗ್ಲೀಷ್‌ನ ನೆರೆಯಲ್ಲೇ ಜರ್ಮನ್, ಫ್ರೆಂಚ್ ಮತ್ತು ಸ್ಪ್ಯಾನಿಷ್ ಭಾಷೆಗಳು ತಮ್ಮ ತಮ್ಮದೇ ತತ್ವಜ್ಞಾನಗಳನ್ನು ರೂಢಿಸಿಕೊಂಡಿರುವುದನ್ನು ಕಾಣುತ್ತೇವೆ. ಕನ್ನಡಿಗರಾದ ನಾವು ತಮ್ಮ ತತ್ವಜ್ಞಾನ, ಸಮಾಜಜ್ಞಾನ, ವಿಜ್ಞಾನ, ಗಣಿತ ಮುಂತಾದ ವಿಷಯಗಳನ್ನು ರೂಢಿಸಿಕೊಳ್ಳಲು ಕಾರ್ಯಪ್ರವೃತ್ತರಾಗಬೇಕಾಗಿದೆ. ಇದಕ್ಕೆ ಇಂಗ್ಲೀಷ್ ಒಂದು ತೊಡಕಾಗಿದೆ. ಅನುಕೂಲವೇ ಯಾಕೆ ಆಗಿರಬಾರದು? ಆರಂಭದ ದಿಸೆಯಲ್ಲಿ ಕೆಲವು ಪ್ರಯತ್ನಗಳು ಅಣಕದಂತೆ ಅನಿಸಬಹುದು, ಅಥವಾ ಅವನ್ನು ಅಣಕುಗಳೆಂದೇ ಕರೆಯೋಣ. ಆದರೆ ಹಾಗೆಂದು ಅವನ್ನು ಮೊಟಕುಗೊಳಿಸಿದರೆ ಮುಂದಿನ ಬೆಳವಣಿಗೆಯೇ ಇಲ್ಲದಂತಾಗುತ್ತದೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಆದ ಅಲ್ಲೋಲ ಕಲ್ಲೋಲಗಳನ್ನು ಜ್ಞಾಪಿಸಿಕೊಂಡರೆ ಇದು ಸ್ಪಷ್ಟವಾಗಬಹುದು. ನವ್ಯ ಸಾಹಿತ್ಯ ಪೂರ್ತಾ ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಲ್ಲಿ ಕನ್ನಡಕ್ಕೆ ಬಂದಿತೆನ್ನುವುದರಲ್ಲಿ ಸಂದೇಹವಿಲ್ಲ. ಇದಕ್ಕೆ ಕಾರಣರಾದವರೂ ಇಂಗ್ಲೀಷ್ ಕಲಿತವರೇ. ಈ ಸಾಹಿತ್ಯ ಚಳುವಳಿ ಕೆಲವು ಅತಿರೇಕಗಳನ್ನು ಕಾಣಿಸಿದ್ದೂ ನಿಜ. ಆದರೂ ಅದು ಕನ್ನಡ ಸಾಹಿತ್ಯವನ್ನು ಇನ್ನಿಲ್ಲದಂತೆ ಗತಿಶೀಲವನ್ನಾಗಿ ಮಾಡಿತೆನ್ನುವುದು ಕೂಡ ಅಷ್ಟೇ ನಿಜ. ಹೀಗೆ ಬೇರೆ ಭಾಷೆಗಳ ಪ್ರಭಾವದಲ್ಲಿ ತಂತಮ್ಮ ಭಾಷಾಸಾಹಿತ್ಯಗಳನ್ನು ವೃದ್ಧಿಸಿಕೊಂಡವರಲ್ಲಿ ಕನ್ನಡಿಗರು ಮೊದಲಿಗರೂ ಅಲ್ಲ,ಕೊನೆಯವರೂ ಅಲ್ಲ. ಜಾಗತಿಕ ಇತಿಹಾಸದ ಗತಿಯೇ ಹೀಗೆ. ಎಲ್ಲಕಿಂತ ಮುಖ್ಯವಾಗಿ ಇಂಗ್ಲೀಷ್ ಭಾಷೆ ಮತ್ತು ಸಾಹಿತ್ಯ ಜಗತ್ತಿನ ಇತರ ಭಾಷೆಗಳಿಗೂ ಸಾಹಿತ್ಯಗಳಿಗೂ ಋಣಿಯಾಗಿರುವುದು. ನವ್ಯ ಸಾಹಿತಿಗಳನ್ನು ಇಂಗ್ಲೀಷ್ ವ್ಯಾಮೋಹಿಗಳೆಂದೂ ಕನ್ನಡ ದ್ವೇಷಿಗಳೆಂದೂ ಕೆಲವರು ತಪ್ಪಾಗಿ ಅರ್ಥ ಮಾಡಿಕೊಂಡರು. ವಾಸ್ತವದಲ್ಲಿ ಅವರು ಕನ್ನಡದ ಪ್ರೀತಿಯಿಂದಲೇ ಬರೆಯುತ್ತಿದ್ದವರು.

ವಾಸ್ತವದಲ್ಲಿ ನೋಡಿದರೆ, ಇಂದಿನ ಜಗತ್ತಿನಲ್ಲಿ ಗಣಿತವಾಗಲಿ,

ವಿಜ್ಞಾನವಾಗಲಿ, ಸಮಾಜಶಾಸ್ತ್ರಗಳಾಗಲಿ ಯಾವುದೇ ಒಂದು ರಾಷ್ಟ್ರದ ಅಥವಾ ಭಾಷೆಯ ಸೊತ್ತಾಗದೆ ಸಾರ್ವತ್ರಿಕವಾಗಿವೆ. ನನ್ನನ್ನು ಕೇಳಿದರೆ, ಅವು ಯಾವತ್ತೂ ಹಾಗೇ ಇದ್ದವು. ಜ್ಞಾನವೆನ್ನುವುದು ಒಂದು ಭಾಷೆಗೆ ಪರಿಮಿತವಲ್ಲ. ಆದರೂ, ಅವರವರ ಮಾತೃಭಾಷೆಯಲ್ಲಿ ಅದು ದೊರಕುವಂತಾದರೆ ಅದಕ್ಕಿಂತ ಹೆಚ್ಚಿನ ಅನುಕೂಲ ಇನ್ನೊಂದಿಲ್ಲ. ಆದ್ದರಿಂದ ನಾವು ಗಾಲಿಯ ಮರುಶೋಧನೆ ಮಾಡದೆ,ಇರುವ ಗಾಲಿಯನ್ನೇ ಇನ್ನಷ್ಟು ನಾಜೂಕಾಗಿ ಹೇಗೆ ಮಾಡಬಹುದು ಎಂಬ ಬಗ್ಗೆ ಯೋಚಿಸಬೇಕಾಗಿದೆ. ಎಂದರೆ ಜ್ಞಾನಪ್ರಕಾರಗಳನ್ನು ನಾವು ಯಾವ ಮೂಲದಿಂದಲಾದರೂ ಪಡೆದು ನಮಗೆ ಬೇಕಾದಂತೆ ಉಪಯೋಗಿಸುವುದು ಸಾಧ್ಯ. ಇದಕ್ಕೆ ನಮ್ಮ ಕನ್ನಡ ರಾಷ್ಟ್ರೀಯತೆ ಅಡ್ಡಬರಬಾರದು.

ಮುಖ್ಯವಾಗಿ ಆಗಬೇಕಾದ ಕಾರ್ಯವೆಂದರೆ ಕನ್ನಡದಲ್ಲಿ ನಾವು ಪ್ರಬುದ್ಧವಾಗಿ ಬರೆಯುವುದು, ಓದುವುದು ಸಾಧ್ಯವಾಗಿಸುವುದು. ವಿಶ್ವದ ಎಲ್ಲಾ ಜ್ಞಾನಸಂಪತ್ತೂ ಕನ್ನಡದಲ್ಲಿ ದೊರಕುವಂತಾಗಬೇಕು. ಆದರೇನೇ ಈ ವಿಷಯಗಳ ಕುರಿತು ಕನ್ನಡದಲ್ಲಿ ಬರೆಯುವುದು, ಚಿಂತಿಸುವುದು ಇಂದಲ್ಲದಿದ್ದರೆ ನಾಳೆಯಾದರೂ ಸಾಧ್ಯವಾಗುವುದು. ಆದರೆ ಹಾಗೆ ಮಾಡಬೇಕಿದ್ದರೆ, ಕನ್ನಡಿಗರೂ ವಿಶ್ವದ ಹಲವು ಭಾಷೆಗಳನ್ನು ಕಲಿತುಕೊಳ್ಳುವುದು ಅಗತ್ಯವೆನ್ನುವುದನ್ನು ಮರೆಯಬಾರದು. ಈ ನಿಟ್ಟಿನಿಂದ ಕರ್ನಾಟಕದಲ್ಲಿ ಯಾಕೆ ವಿದೇಶ ಭಾಷಾ ವಿಶ್ವವಿದ್ಯಾನಿಲಯವೊಂದನ್ನು ಸ್ಥಾಪಿಸಬಾರದು? ಈವತ್ತು ಕನ್ನಡಿಗರು ಚೀನಿ, ಜಪಾನೀ, ಸ್ಪ್ಯಾನಿಷ್ ಇತ್ಯಾದಿ ಭಾಷೆಗಳನ್ನು ಕಲಿಯಬೇಕಿದ್ದರೆ ಕರ್ನಾಟಕದ ಹೊರಕ್ಕೆ ಹೋಗಬೇಕಾಗಿದೆ. ರಶಿಯನ್, ಫ್ರೆಂಚ್ ಮತ್ತು ಜರ್ಮನ್ ಭಾಷೆಗಳನ್ನಷ್ಟೆ ಕರ್ನಾಟಕದ ಕೆಲವೆಡೆ ಸ್ವಲ್ಪಮಟ್ಟಿಗೆ ಕಲಿಸಲಾಗುತ್ತಿದೆ. ಕನ್ನಡದ ಪ್ರಗತಿಗೆ ಈ ಅಲ್ಪ ಪ್ರಮಾಣ ಏನೇನೂ ಸಾಲದು. ಪ್ರತಿಯೊಂದು ವಿಶ್ವವಿದ್ಯಾಲಯುದಲ್ಲೂ ಕೆಲವು ಕಾಲೇಜು ಹೈಸ್ಕೂಲುಗಳಲ್ಲೂ ಪ್ರಮುಖ ವಿದೇಶ ಭಾಷೆಗಳ ಅಧ್ಯಯನಕ್ಕೆ ಅನುಕೂಲವಿರಬೇಕು. ಯಾವ ಭಾಷೀಯರು ಹೆಚ್ಚು ಹೆಚ್ಚು ಭಾಷೆಗಳನ್ನು ಕಲಿಯುತ್ತಾರೋ ಆ ಭಾಷೀಯರಿಗೆ ಅದರಿಂದ ದೂರಕಾಲೀನ ಅನುಕೂಲತೆಗಳು ಒದಗುವುದರಲ್ಲಿ ಸಂಶಯವಿಲ್ಲ. ಬೇರೆ ಬೇರೆ ಭಾಷೆಗಳಿಂದ ನಾವು ಕನ್ನಡಕ್ಕೆ ಭಾಷಾಂತರಿಸುವ ಜತೆಗೇ ಕನ್ನಡದ ಉತ್ತಮ ಕೃತಿಗಳು ಈ ವಿದೇಶ ಭಾಷೆಗಳಿಗೂ ಅನುವಾದಗೊಳ್ಳಬೇಕಾಗಿದೆ.

ಕನ್ನಡ ಭಾಷೆ ಕಲಿಯಲು ಕೆಲವು ವಿದೇಶಿಯರು ಆಸಕ್ತಿ ತೋರಿಸುತ್ತಿದ್ದಾರೆ. ಕನ್ನಡ ವಿದ್ವಾಂಸರು ಹಾಗೂ ಕರ್ನಾಟಕ ಸರಕಾರ ಈ ದಿಸೆಯಲ್ಲಿ ಗಂಭೀರವಾದ ಯೋಜನೆಗಳನ್ನು ಹಾಕಿಕೊಳ್ಳುವ ಅಗತ್ಯವಿದೆ. ಉದಾಹರಣೆಗೆ, ವಿದೇಶಿಯುರಿಗೆ ಕನ್ನಡ ಕಲಿಯುಲು ಕರ್ನಾಟಕದ ವಿಶ್ವವಿದ್ಯಾನಿಲಯಗಳಲ್ಲಿ ಕೆಲವು ಸ್ಕಾಲರ್‌ಶಿಪ್‌ಗಳನ್ನು ಸ್ಥಾಪಿಸುವುದು; ಅಮೆರಿಕ,

ಇಂಗ್ಲೆಂಡ್, ಜರ್ಮನಿ ಮುಂತಾದ ರಾಷ್ಟ್ರಗಳ ಕೆಲವು ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಕಲಿಸುವ ಕುರಿತಾದ ಸಾಧ್ಯತೆಗಳನ್ನು ಅನ್ವೇಷಿಸುವುದು; ಆ ದೇಶಗಳಲ್ಲಿ ಕನ್ನಡ ಕಲಿಯಲು ಮುಂದೆ ಬರುವ ವಿದ್ಯಾರ್ಥಿಗಳಿಗೆ ಆಯಾ ವಿಶ್ವವಿದ್ಯಾನಿಲಯಗಳಲ್ಲೇ ಕೆಲವು ಫೆಲೋಶಿಪ್‌ಗಳನ್ನು ನೀಡುವುದು; ಕನ್ನಡವನ್ನು ಜಗತ್ತಿನ ಯಾರು ಬೇಕಾದರೂ ಕಲಿಯಲು ಸುಲಭವಾಗುವಂತೆ ವೆಬ್‌ಸೈಟಿನ ಮೂಲಕ ಕೆಲವು ಇಂಟಾರಾಕ್ಟಿವ್ ಮಲ್ಟಿಮೀಡಿಯಾ ಕೋರ್ಸುಗಳನ್ನು ತಯಾರಿಸಿ ಅಂತರಜಾಲದಲ್ಲಿ ಬಿತ್ತರಿಸುವುದು; ಇದೇ ರೀತಿ ಕನ್ನಡದ ಬಹು ಭಾಷೀಯ ನಿಘಂಟುಗಳು ಅಂತರಜಾಲದಲ್ಲಿ ದೊರಕುವಂತೆ ಮಾಡುವುದು; ಕನ್ನಡದ ಹಾಡುಗಳು, ಗೀತೆಗಳು, ಸಣ್ಣಕತೆಗಳು, ಕವಿತೆಗಳು, ಚಿಕ್ಕ ಚಿಕ್ಕ ಕಾದಂಬರಿಗಳು ಕನ್ನಡ ಕಲಿಯಲು ಯಾವ ಯಾವ ಪಠ್ಯಗಳು ಸಹಾಯಕವಾಗುತ್ತವೋ ಅಂಥ ಪಠ್ಯಗಳು ಸಿಡಿ, ಡಿವಿಡಿ, ಅಂತರಜಾಲ ಮುಂತಾದ ಇಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಧ್ವನಿ–ಚಿತ್ರ–ಟಿಪ್ಪಣಿ ಸಹಿತ ಧಾರಾಳವಾಗಿ ಸಿಗುವಂತೆ ಮಾಡುವುದು ಇಂಥ ವ್ಯಾಪಕವೂ ದೂರಗಾಮಿಯೂ ಆದ ಯೋಜನೆಗಳಿಲ್ಲದೆ ಈ ದಿನಗಳಲ್ಲಿ ಭಾಷೆಯೊಂದರ ರಕ್ಷಣೆ ಹಾಗೂ ಅಭಿವೃದ್ಧಿಯ ಕುರಿತು ಮಾತನಾಡುವುದು ಅರ್ಥಹೀನವಾಗುತ್ತದೆ. ಸಂಗತಿಗಳು ಕಠಿಣವಾದಾಗ ಕಠಿಣರಾದವರೇ ಮುಂದೆ ಹೋಗುವುದು ಎಂಬ ಇಂಗ್ಲೀಷ್ ಗಾದೆಯಿದೆ. ಈ ಹೊತ್ತು ಜಪಾನೀಯರು ಮತ್ತು ಚೀನಿಯರು ತಮ್ಮ ತಮ್ಮ ಭಾಷೆಗಳನ್ನು ವಿದೇಶಗಳಲ್ಲಿ ಪ್ರಚಾರಪಡಿಸುವುದಕ್ಕೆ ಸಾಕಷ್ಟು ಹಣ ಸುರಿಯುತ್ತಿದ್ದಾರೆ. ಈ ಭಾಷೆಗಳ ಪಾಠಗಳು ಅಂತರಜಾಲದಲ್ಲೂ ಲಭ್ಯ. ಕನ್ನಡದ ಮಟ್ಟಿಗೆ ಹೇಳುವುದಾದರೆ ಈ ನಿಟ್ಟಿನಲ್ಲಿ ಸಾಕಷ್ಟು ಪ್ರಮಾಣದ ಕೆಲಸ ನಡೆದಿಲ್ಲ. ಈಗ ಅಂತರಜಾಲದಲ್ಲಿ ಲಭ್ಯವಿರುವ ಕೆಲವೇ ಕನ್ನಡ ಪಠ್ಯಗಳಿಗೆ ಕಾರಣ ಖಾಸಗಿ ಉಮೇದು ಮಾತ್ರ. ಕರ್ನಾಟಕ ಸರಕಾರ, ಸಾಹಿತ್ಯ ಅಕಾಡೆಮಿ, ಸಾಹಿತ್ಯ ಪರಿಷತ್ತು, ಕನ್ನಡ ವಿಶ್ವವಿದ್ಯಾಲಯ ಹಾಗೂ ಇನ್ನಿತರ ವಿಶ್ವವಿದ್ಯಾಲಯಗಳು ಈ ಕುರಿತು ಯೋಜನೆಗಳನ್ನು ತಯಾರಿಸಿ ಕಾರ್ಯಗತಗೊಳಿಸುವುದು ತುರ್ತಾಗಿ ನಡೆಯಬೇಕಾದ ಕೆಲಸ.

–ಸಾಭಾರ–ಪ್ರಜಾವಾಣಿ

* * *

ಮಕ್ಕಳು ಮತ್ತು ಕಥೆಗಳು

-ರವಿ

[ಮಕ್ಕಳನ್ನು ಬುದ್ಧಿವಂತರನ್ನಾಗಿ ಮಾಡಲು ಕೋಲಿಗಿಂತ ಹೆಚ್ಚಿನ ಶಕ್ತಿ ಕಥೆಗಳಲ್ಲಿದೆ ಎಂಬೀ ಮಾತಿಗೆ ಪಂಚತಂತ್ರದ ಕಥೆಗಳು ಮತ್ತು ಅದರ ಹಿನ್ನೆಲೆ ಶಾಕ್ಷಿಯಾಗಿದೆ, ಕಥೆಗಳ ಮೂಲಕ ಕಲಿಕೆ ಎಂಬುದು ಇಂದೂ ಬಹು ಪ್ರಸ್ತುತ ಮತ್ತು ಅಗತ್ಯ. -ಸಂ]

ಪಂಚತಂತ್ರದ ಕತೆಗಳು ಮಕ್ಕಳಿಗಾಗಿಯೇ ರಚನೆಗೊಂಡಿವೆ. ಮಕ್ಕಳ ಡೊಂಕು ಬುದ್ಧಿಯನ್ನು ತಿದ್ದಿ, ಅವರು ಒಳ್ಳೆಯ ರೀತಿ-ನೀತಿ ನಡೆನುಡಿಗಳನ್ನು ಕಲಿತು ಸನ್ಮಾರ್ಗದಲ್ಲಿ ನಡೆಯುವಂತೆ ಮಾಡುವುದೇ ಈ ಕತೆಗಳ ಉದ್ದೇಶ. ಲೋಕಪ್ರಸಿದ್ಧಿ ಪಡೆದ ಈ ಅರ್ಥಪೂರ್ಣ ಕತೆಗಳ ಜನಕ ಮಹಾಗುರು ವಿಷ್ಣುಶರ್ಮ.

ವಿಷ್ಣುಶರ್ಮ ಮಹಾಪಂಡಿತ. ಮಹಾಜ್ಞಾನಿ, ಸಾಕಷ್ಟು ವಯಸ್ಸಾದ ಲೋಕನುಭವಿ. ಅಲ್ಲದೆ ಮಕ್ಕಳ ಮನೋಧರ್ಮವನ್ನು ಅರಿತ ಮನೋವಿಜ್ಞಾನಿ. ಈತ ಮಿತ್ರಭೇದ. ಮಿತ್ರ ಸಂಪ್ರಾಪ್ತಿ. ಕಾಕೂಲೋಕಿಯ. ಲಬ್ಧ ಪ್ರಣಾಶ ಮತ್ತು ಅಪರೀಕ್ಷಿತಕಾರಕ ಎಂಬ ಐದು ತಂತ್ರಗಳ ಆಧಾರದ ಮೇಲೆ ಕತೆಗಳನ್ನು ರಚಿಸಿದ್ದಾನೆ. ಆದುದರಿಂದಲೇ ಅವಕ್ಕೆ ಪಂಚತಂತ್ರದ ಕತೆಗಳು ಎಂಬ ಹೆಸರು ಬಂದಿದೆ.

ಮಾನವ ಸಮಾಜದಲ್ಲಿ ನಡೆಯುವ ಸಾಮಾನ್ಯ ಘಟನೆಗಳನ್ನು ಆಧಾರ ಮಾಡಿಕೊಂಡು ಪಾತ್ರಗಳಲ್ಲಿ ಮಾನವರ ಬದಲು ಕಾಡಿನ ಪ್ರಾಣಿ ಪಕ್ಷಿಗಳನ್ನೇ ಬಳಸಿಕೊಂಡು ಹೆಣೆದ ಪಂಚತಂತ್ರದ ಕಥೆಗಳು ತುಂಬಾ ಮನೋಜ್ಞವಾಗಿವೆ. ಬೋಧಪ್ರದವಾಗಿವೆ. ಸ್ವಾರಸ್ಯಪೂರ್ಣವೂ ಆಗಿವೆ. ಈ ಕತೆಗಳು ನಿಜಕ್ಕೂ ಸರ್ವಕಾಲಿಕ. ಮಕ್ಕಳಲ್ಲಿ ಕುತೂಹಲ ಕೆರಳಿಸಿ. ಅವರ ಮನಸ್ಸಿಗೆ ಮುದ ನೀಡುವುದರಲ್ಲೂ ಯಶಸ್ವಿಯಾಗಿವೆ.

ಮಹಾನುಭಾವನಾದ ವಿಷ್ಣುಶರ್ಮ ಲೋಕೋಪಕಾರಿಯಾದ ಈ ಪುಟಾಣಿ ಕತೆಗಳನ್ನು ಏಕೆ ಬರೆದ? ಯಾರಿಗಾಗಿ ಬರೆದ? ಎಂಬುದಕ್ಕೂ ಒಂದು ಕತೆಯಿದೆ.

ಹಿಂದೆ ದಕ್ಷಿಣ ಭಾಗದಲ್ಲಿ ಮಹಿಳಾರೋಪ್ಯ ಎಂಬ ಒಂದು ರಾಜ್ಯವಿತ್ತು. ಅದನ್ನು ಅಮರಶಕ್ತಿ ಎಂಬ ರಾಜ ಆಳುತ್ತಿದ್ದ. ಆತನಿಗೆ ಮೂರು ಜನ ಗಂಡುಮಕ್ಕಳಿದ್ದರು. ಅವರನ್ನು ಅತಿಯಾದ ಮುದ್ದಿನಿಂದ ಸಾಕಿದ ಕಾರಣ, ಅವರು ತಪ್ಪುದಾರಿ ತುಳಿದರು. ಅವಿದ್ಯಾವಂತರೂ, ಅವಿವೇಕಿಗಳೂ ಆದರು. ಅಜ್ಞಾನಿಗಳಾಗಿ, ಅಹಂಕಾರಿಗಳಾಗಿ ಮೆರೆದರು. ಅವರನ್ನು ತಿದ್ದಿ ಸನ್ಮಾರ್ಗದಲ್ಲಿ ನಡೆಸಲು ಯಾರಿಂದಲೂ ಸಾಧ್ಯವಿಲ್ಲ ಎನ್ನುವಷ್ಟು ಅವರು ಕೆಟ್ಟು ಹೋಗಿದ್ದರು.

ರಾಜಾ ಅಮರಶಕ್ತಿಗೆ ಇದೊಂದು ದೊಡ್ಡ ಸಮಸ್ಯೆಯಾಯಿತು. ದಿನನಿತ್ಯದ ಚಿಂತೆಯಾಯಿತು. ತನ್ನ ಮಕ್ಕಳನ್ನು ವಿದ್ಯಾವಂತರನ್ನಾಗಿ, ಬುದ್ಧಿವಂತರನ್ನಾಗಿ ಮಾಡಲು ಅವನು ಮಾಡಿದ ಪ್ರಯತ್ನ ಪ್ರಯೋಗಗಳೆಲ್ಲಾ ನಿಷ್ಫಲಗೊಂಡವು. ಆದ್ದರಿಂದ ಅವನು ಪ್ರತಿದಿನ "ಅಯ್ಯೋ ದೇವರೆ, ನನಗೆ ಮೂರು ಜನ ಗಂಡುಮಕ್ಕಳಿದ್ದರೂ, ನನ್ನ ಉತ್ತರಾಧಿಕಾರಿಯಾಗುವ ಯೋಗ್ಯತೆ ಒಬ್ಬನಿಗೂ ಇಲ್ಲವಾಯಿತಲ್ಲಾ," ಎಂದು ಕೊರಗುತ್ತಿದ್ದ; ಸೊರಗುತ್ತಿದ್ದ.

ಕಡೆಗೆ ಅವನಿಗೆ ಅವನ ಮಂತ್ರಿಯ ಪ್ರಯತ್ನದಿಂದಾಗಿ ವಿಷ್ಣುಶರ್ಮನೆಂಬ ಜ್ಞಾನಿಯ ಪರಿಚಯವಾಯಿತು. ಆ ಜ್ಞಾನಿ ರಾಜನ ಸಮಸ್ಯೆಯನ್ನು ಅರ್ಥಮಾಡಿಕೊಂಡ ಬಳಿಕ " ನಾನು ಇನ್ನು ಆರೇ ತಿಂಗಳಲ್ಲಿ ನಿನ್ನ ಮೂರೂ ಮಕ್ಕಳನ್ನು ವಿದ್ಯಾವಂತರನ್ನಾಗಿ, ಬುದ್ಧಿವಂತರನ್ನಾಗಿ ಮಾಡುತ್ತೇನೆ" ಎಂದು ವಚನ ನೀಡಿದ.

ಆ ಮಹಾ ಪಂಡಿತನ ಆತ್ಮವಿಶ್ವಾಸದ ಮಾತುಗಳನ್ನು ಕೇಳಿ ರಾಜನಿಗೆ ಆಶ್ಚರ್ಯವಾಯಿತು. ಆನಂದವಾಯಿತು. ಮನಸ್ಸಿನಲ್ಲಿ ಆಶಾಕಿರಣ ಮೂಡಿತು. ಕಗ್ಗತ್ತಲಲ್ಲಿ ಬೆಳಕು ಕಂಡಷ್ಟು ಖುಷಿಯಾಯಿತು. ಆಗ ಅವನು ಮರುಮಾತಾಡದೆ ಆತನಿಗೆ ಉದ್ದಂಡ ನಮಸ್ಕಾರ ಮಾಡಿದ. ತನ್ನ ಮೂರು ಮಂದಿ ರಾಜಕುಮಾರರನ್ನೂ ಆತನಿಗೆ ಒಪ್ಪಿಸಿ ನೆಮ್ಮದಿಯಿಂದ ಉಸಿರಾಡಿದ.

ಮಹಾಗುರು ವಿಷ್ಣುಶರ್ಮ ಆ ರಾಜಕುಮಾರರನ್ನು ಆಶ್ರಮದ ವಾತಾವರಣದಲ್ಲಿದ್ದ ತನ್ನ ಮನೆಗೆ ಕರೆದು ತಂದ. ಅಲ್ಲಿ ಅವರನ್ನು ಕೆಲವು ದಿನ ಸ್ವತಂತ್ರವಾಗಿರಲು ಬಿಟ್ಟ. ಅವರಿಗೆ ತಿಳಿಯದಂತೆ ಅವರ ರೀತಿ–ನೀತಿ, ಆಸೆ–ಅಭಿರುಚಿ ಇತ್ಯಾದಿಗಳನ್ನು ಪರಿಶೀಲಿಸಿದ.

ಆ ಬಳಿಕ ಆತ ಅವರಿಗೆ ಯಾವ ರೀತಿಯ ಶಿಕ್ಷಣ ನೀಡಿದರೆ ಮೇಲು ಎಂದು ಯೋಚಿಸಿದ. ಆಗ ಆತನು ಕತೆಗಳೆಂದರೆ ಮಕ್ಕಳಿಗೆ ಎಲ್ಲಿಲ್ಲದ ಆಸೆ. ಆದುದರಿಂದ ನೀತಿಯುಕ್ತವಾದ ಕತೆಗಳ ಮೂಲಕವೇ ಅವರ ಕಲಿಕೆಯನ್ನು ಆರಂಭಿಸಬೇಕು. ಆ ಕತೆಗಳಲ್ಲಿ ಬರುವ ಪಾತ್ರಗಳಿಗೆ ಪ್ರಾಣಿ–ಪಕ್ಷಿಗಳನ್ನೆ ಅಳವಡಿಸಿಕೊಂಡು ಹೇಳಿದರೆ, ಅವರು ಹೆಚ್ಚಿನ ಕುತೂಹಲದಿಂದ ಕತೆಗಳನ್ನು ಕೇಳುತ್ತಾರೆ, ಎನಿಸಿತು.

ಆತನಿಗೆ ಬಂದ ಈ ಯೋಚನೆಯೆ ಪಂಚತಂತ್ರದ ಕತೆಗಳನ್ನು ಬರೆಯಲು ಸ್ಫೂರ್ತಿಯಾಯಿತು. ಮಾನವ ಲೋಕದ ಸಾಮಾನ್ಯ ರೀತಿನೀತಿ ಸಮಸ್ಯೆ ಸವಾಲುಗಳಿಂದ ಕೂಡಿದ ಕತೆಗಳನ್ನು ಪ್ರಾಣಿ–ಪಕ್ಷಿಯ ಪಾತ್ರಗಳ ಮೂಲಕ ಕಲ್ಪಿಸಿಕೊಂಡು ಅವನ್ನು ಐದು ತಂತ್ರಗಳಲ್ಲಿ ವಿಂಗಡಿಸಿ ಸೊಗಸಾಗಿ, ಪರಿಣಾಮಕಾರಿಯಾಗಿ ಬರೆದ.

ಈ ಕತೆಗಳ ಮೂಲಕವೇ ಆ ಮೂರ್ಖ ರಾಜಕುಮಾರರ ವಕ್ರ ಬುದ್ಧಿಯನ್ನು ತಿದ್ದಲು ಪ್ರಾರಂಭಿಸಿದ. ಕ್ರಮೇಣದಲ್ಲಿ ಪ್ರಯತ್ನ ಫಲಿಸಿತು. ಅವರಲ್ಲಿ ಸಾಕಷ್ಟು ಬದಲಾವಣೆ–ಸುಧಾರಣೆಗಳು ಕಂಡುಬಂದವು. ಇದರಿಂದ ವಿಷ್ಣುಶರ್ಮ ಇನ್ನಷ್ಟು ಉತ್ತೇಜಿತನಾದ. ಎಲ್ಲಿಲ್ಲದ ಶ್ರದ್ಧೆ, ನಿಷ್ಠೆ ಪ್ರೀತಿ ವಾತ್ಸಲ್ಯಗಳಿಂದ ಶಿಕ್ಷಣ ನೀಡತೊಡಗಿದ. ಆತನ ಶ್ರಮ ಸಾರ್ಥಕವಾಯಿತು. ಮೂರೂ ಮಂದಿ ರಾಜಕುಮಾರರು ವಿದ್ಯಾಬುದ್ಧಿಗಳನ್ನು ಕಲಿತು ಜಾಣರಾದರು. ವಿಷ್ಣುಶರ್ಮ ಆರು ತಿಂಗಳು ತುಂಬುವ ವೇಳೆಗೆ ಸರಿಯಾಗಿ ರಾಜಕುಮಾರರನ್ನು ಕರೆದುಕೊಂಡು ಹೋಗಿ ಅವರ ತಂದೆಗೆ(ರಾಜನಿಗೆ) ಒಪ್ಪಿಸಿಯೇ ಬಿಟ್ಟ

ಕೇವಲ ಆರು ತಿಂಗಳಲ್ಲಿ ಕಾಡುಗಲ್ಲಿನಂತಿದ್ದ ತನ್ನ ಮಕ್ಕಳನ್ನು ಇಷ್ಟು ಸೊಗಸಾದ ಸುಂದರ ವಿಗ್ರಹಗಳನ್ನಾಗಿ ಕೆತ್ತಿದ ವಿಷ್ಣುಶರ್ಮನ ಅದ್ಭುತ ಬುದ್ಧಿಕೌಶಲ್ಯವನ್ನು ಕಂಡು ರಾಜ ದಂಗಾಗಿ ಹೋದ.

ವಿದ್ಯೆ ಕಲಿಸುವ ಗುರುವೃಂದಕ್ಕೆ ಮುಕುಟ ಪ್ರಾಯನಾದ ಮಹಾಗುರು ವಿಷ್ಣುಶರ್ಮ ನಿಜಕ್ಕೂ ಧನ್ಯ! ನಿಜಕ್ಕೂ ಧನ್ಯಾತ್ಮ!! ಎನಿಸಿದ.

ಹೊಣೆ ಯಾರು? ಮಕ್ಕಳೆ? ತಾಯಿತಂದೆಗಳೆ?

–ಡಾ॥ ರಮಣ ಪಟೇಲ್.

ಪ್ರಪಂಚದಲ್ಲಿ ಸಣ್ಣ ಮಕ್ಕಳನ್ನು ಪ್ರೀತಿಸದ ಜನ ಬಹು ಕಡಿಮೆ. ಪ್ರತಿಯೊಬ್ಬನ ಹೃದಯದಲ್ಲೂ ಮಕ್ಕಳ ಬಗೆಗೆ ಒಂದು ವಿಶಿಷ್ಟ ಭಾವನೆ ಇರುತ್ತದೆ. ಏಕೆಂದರೆ ಹಿಂದೆ ಅವನೂ ಹುಡುಗನೇ ಆಗಿದ್ದನಷ್ಟೆ! ತಾವು ಮತ್ತೆ ಮಕ್ಕಳಾಗಿಬಿಟ್ಟರೆ ಅದೆಷ್ಟು ಮೋಜಾಗುತ್ತಿತ್ತೆಂದು ಅನೇಕರು ಯೋಚಿಸುತ್ತಾರೆ. ಅದೆಷ್ಟು ಲೇಸಾಗುತ್ತಿತ್ತೆಂದು ಹಲವರು ಹಂಬಲಿಸುತ್ತಾರೆ.

ತಮ್ಮ ತಾಯಿತಂದೆಗಳು ತಮ್ಮನ್ನು ಬೇರೆಯ ವಿಧದಿಂದ ಸಾಕಿ ಸಲಹುತ್ತಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತೆಂದು ಹಲವರು ಮನದಲ್ಲೇ ಅಸಂತೋಷ ಪಡುತ್ತಾರೆ. ಈ ಅಸಂತೋಷ ಅವರ ಬದುಕಿನುದ್ದಕ್ಕೂ ಇರುತ್ತದೆ. ಏಕೆಂದರೆ ಬಾಲ್ಯದಲ್ಲಿ ನಮ್ಮ ಮನದಮೇಲಾಗುವ ಪ್ರಭಾವ ಅಳಿಯುವುದಿಲ್ಲ. ನಾವೆಷ್ಟೇ ಅಡಗಿಸಲೆತ್ನಿಸದರೂ ಅದು ತಾನಾಗಿಯೇ ಪ್ರಕಟವಾಗುತ್ತದೆ. ನಮ್ಮ ಯಾವ ಇಚ್ಛೆಯಾಗಲೀ ಭಾವನೆಯಾಗಲೀ ಅತೃಪ್ತವಾಗಿದ್ದರೆ ಅದು ಅನುಕೂಲ ವಾತಾವರಣ ಹೊಂದಿ ಹೊರ ಹೊಮ್ಮಿಯೇಬಿಡುತ್ತದೆ. ಎಷ್ಟೋ ತಾಯಂದಿರು ಸಿಟ್ಟಾಗಿ ತಮ್ಮ ಮಕ್ಕಳನ್ನು ಹೊಡೆದುಬಿಡುತ್ತಾರೆ. ಮತ್ತೆ ಅಳಲಾರಂಭಿಸುತ್ತಾರೆ. ಹೀಗೇಕೆ ಆಗುತ್ತದೆ? ಇದೆಲ್ಲ ಅವರ ಇಚ್ಛೆಗೆ ವಿರುದ್ಧವಾಗಿಯೇ ನಡೆಯುತ್ತದೆ.

ತಾಯಿಯಿಂದ ತನಗೆ ದೊರೆಯುವ ಶಿಕ್ಷೆ ತನ್ನ ಹಿತಕ್ಕಾಗಿಯೇ ಎಂದು ಬಾಲಕ ಭಾವಿಸಿಕೊಂಡಿದ್ದರೆ ಆ ಶಿಕ್ಷೆಯಿಂದ ಅವನ ಮನದಮೇಲೇನೂ ದುಷ್ಪರಿಣಾಮ ಉಂಟಾಗಲಾರದು. ಹೆಚ್ಚಾಗಿ ಮಕ್ಕಳು ತಂದೆತಾಯಂದಿರಿಗೆ ಹೆದರುತ್ತಾರೆ. ತಾವು ನಿರಾಧಾರರೆಂದೂ ಮಾತಾಪಿತರನ್ನು ಬಿಟ್ಟು ತಮಗೆ ಅನ್ಯ ಸಹಾಯಕರಿಲ್ಲವೆಂದೂ, ಆದ್ದರಿಂದ ತಂದೆತಾಯಿಗಳ ಮಾತು ಕೇಳಬೇಕೆಂದೂ ಅವರು ನಿರ್ಧರಿಸಿಕೊಂಡಿರುತ್ತಾರೆ. ಆದರೆ ಅವರ ಹೃದಯದಲ್ಲಿ ಹೆತ್ತವರ ಕುರಿತು ಸಿಡುಕು ಇದ್ದೇ ಇರುತ್ತದೆ. ಆಗ ಅವರು ಅದನ್ನು ಹತ್ತಿಕ್ಕಿಕೊಂಡರೂ ಪ್ರಾಯಕ್ಕೆ ಬಂದ ಮೇಲೆ ತಾವು ಸ್ವತಂತ್ರರಾಗಿ ಇರಬಲ್ಲವೆಂಬ ಭಾವನೆ ಮೂಡಿದಾಗ ತಂದೆ ತಾಯಿಗಳನ್ನು ಎದುರಿಸಲು ಆರಂಭಿಸುತ್ತಾರೆ. ಅವರ ಪ್ರತಿ ಮಾತನ್ನೂ ವಿರೋಧಿಸುತ್ತಾರೆ. ಆಂ! ಈತ ತುಂಬ ಸಾಧುಸ್ವಭಾವಿಯಿದ್ದನಲ್ಲ! ಈಗ ಒಮ್ಮೆಲೇ ಇಂಥ ಉದ್ಧಟ ಹೇಗಾದ!' ಎಂದು ತಾಯಿತಂದೆ ಬೆರಗಾಗುತ್ತಾರೆ. ಆದರೆ ವಾಸ್ತವವಾಗಿ ಆತ ಒಮ್ಮೆಲೇ ಉದ್ಧಟವಾದುದಲ್ಲ. ಅವನು ಎಷ್ಟೋ ಸಮಯದಿಂದ ಹತ್ತಿಕ್ಕಿದ್ದ ಭಾವನೆಗಳನ್ನೇ ಈಗ ಪ್ರಕಟಪಡಿಸಿದನಷ್ಟೇ. ಈ ರೀತಿ ಭಾವನೆಗಳನ್ನು ಹತ್ತಿಕ್ಕುವುದರಿಂದಲೇ ಉಬ್ಬಸ, ರಕ್ತಾಧಿಕ, ಸಿಹಿಮೂತ್ರ– ಮೊದಲಾದ ಕಾಹಿಲೆಗಳು ತಲೆದೋರುವುದುಂಟು.

ಮಕ್ಕಳಿಂದ ಏನಾದರೂ ತಪ್ಪಾದಾಗ ಹಿರಿಯರು ಅವರ ಮೇಲೆ ರೇಗುತ್ತಾರೆ.

ಈ ರೇಗಾಟವೂ ಹಲವು ತೆರ. ಉದಾಹರಣೆಗಾಗಿ ಒಬ್ಬ ಹುಡುಗನ ಕೈಯಿಂದ ಒಂದು ಗ್ಲಾಸು ಕೆಳಬಿದ್ದು ಚೂರಾಯಿತೆನ್ನಿ, ಅಂತಹ ವೇಳೆ ಒಬ್ಬಳು ತಾಯಿ ಅವನನ್ನು ಹೊಡೆಯಬಹುದು. ಇನ್ನೊಬ್ಬಳು ಗದರಿಸಬಹುದು. ಮತ್ತೊಬ್ಬಳು ಅವನ ತಂದೆಗೆ ತಿಳಿಸಿ ಹೊಡೆಯಿಸಬಹುದು. ಶಿಕ್ಷೆಯ ಈ ವೈವಿಧ್ಯ ಆ ತಾಯಿ ಬಾಲ್ಯದಲ್ಲಿ ಹತ್ತಿಕ್ಕಿದ ಭಾವನೆಗೆ ಅನುಗುಣವಾಗಿಯೇ ಇರುತ್ತದೆ. ಕೆಲವೊಮ್ಮೆ ನಾವು ಸಾಧಾರಣ ವಿಚಾರಕ್ಕಾಗಿ ರೇಗಾಡುತ್ತೇವೆ. ಇದಕ್ಕೆ ಬಾಲ್ಯದಲ್ಲಿ ನಾವು ಹತ್ತಿಕ್ಕಿದ್ದ ಮನೋಭಾವನೆಯೇ ಕಾರಣ. ಕೆಲ ಜನರು ಮನೆ, ಸಂಸ್ಥೆ, ರಾಷ್ಟ್ರ- ಎಲ್ಲೆಡೆಯಲ್ಲೂ ತಾವು ಅಧಿಕಾರ ಚಲಾಯಿಸಬೇಕೆಂದು ಇಚ್ಛಿಸುತ್ತಾರೆ, ಇದರ ಮೂಲದಲ್ಲೂ ಮೇಲೆ ಹೇಳಿದ ಭಾವನೆಯೇ ಪ್ರಾಯಭರಿತರಾದ ಮೇಲೆ ಈ ರೀತಿ ಹೊರಬೀಳುತ್ತದೆ. ಆದ್ದರಿಂದ ಮಕ್ಕಳ ಯೋಗ್ಯ ಲಾಲನೆಪಾಲನೆಯತ್ತ ಎಷ್ಟು ಲಕ್ಷ್ಯವಹಿಸಿದರೂ ಸಾಲದೆಂದು ನಿಮಗೀಗ ಮನವರಿಕೆಯಾಗಿರಬಹುದು.

ಯಾವ ಹುಡುಗ ಎಷ್ಟು ಕಲಿತಿದ್ದಾನೆ-ಎಂಬುದನ್ನು ನೋಡದೆ, ಅವನಲ್ಲಿ ಎಷ್ಟು ಧೈರ್ಯ ಹಾಗೂ ಎಷ್ಟು ನಿರ್ಭಯತೆ ಇದೆಯೆಂದು ಮೊದಲು ನೋಡಬೇಕು. ತಮ್ಮ ಮಗ ಅಂಜುಕುಳಿಯಾಗಬಾರದೆಂದು ಪ್ರತಿಯೊಬ್ಬರೂ ಆಶಿಸುತ್ತಾರೆ. ಆದರೆ ಪಾಲಕರು ಭಯವೋಡಿಸಲು ಕೈಗೊಳ್ಳುವ ಉಪಾಯಗಳಿಂದ ಅವರು ಮತ್ತಷ್ಟು ಹೆದರಿಕೆಗೆ ಗುರಿಯಾಗುತ್ತಾರೆ. ಸ್ವಾಭಾವಿಕವಾಗಿ ಮಕ್ಕಳು ನಿರ್ಭಯರೇ ಆಗಿರುತ್ತಾರೆ. ನಾವೇ ಅವರನ್ನು ಅಂಜುಕುಳಿಗಳನ್ನಾಗಿ ಮಾಡುತ್ತೇವೆ.

ಒಬ್ಬ ಹುಡುಗ ತಂದೆಯೊಡನೆ ತಿರುಗಾಡಲು ಹೋಗಿದ್ದ. ಉದ್ಯಾನದಲ್ಲಿ ಜಾರುಬಂಡೆಯೊಂದಿತ್ತು. 'ನಾನು ಆಡುವುದಿಲ್ಲ; ಹೆದರಿಕೆಯಾಗುತ್ತದೆ'- ಎಂದ ಹುಡುಗ. ತನ್ನ ಹುಡುಗ ಹೆದರುತ್ತಿದ್ದಾನಲ್ಲಾ- ಎಂಬ ಸಂಗತಿ ತಂದೆಯ ಅಹಂಕಾರಕ್ಕೆ ಆಘಾತ ಉಂಟುಮಾಡಿತ್ತು. ಅವರು ಬಲಾತ್ಕಾರವಾಗಿ ಮಗನನ್ನು ಮೇಲಿಂದ ತಳ್ಳಿಬಿಟ್ಟರು. ಹುಡುಗನೇನೋ ಜಾರುತ್ತಾ ಜಾರುತ್ತಾ ಬಂದನಾದರೂ ಅವನ ಮನಸ್ಸಿನ ಹೆದರಿಕೆ ಹೆಚ್ಚಿತೆ ವಿನಾ ಕಡಿಮೆಯಾಗಲಿಲ್ಲ. ಈ ಘಟನೆ ನಡೆದು ೨೫ ವರ್ಷ ಕಳೆದರೂ ಆ ಮನುಷ್ಯ ಬಾಲ್ಯದ ಆ ಘಟನೆಯನ್ನು ಮರೆಯಲೇ ಇಲ್ಲ. ತಂದೆಯ ಅಹಂಕಾರದ ಪರಿಣಾಮವಾಗಿ ಹುಡುಗ ಅಂಜುಕುಳಿಯೇ ಆಗಿ ಉಳಿದ.

ಒಬ್ಬ ಹುಡುಗನ ಪರೀಕ್ಷೆಗೆಂದು ತಂದೆತಾಯಿಗಳು ನಮ್ಮ ಆಸ್ಪತ್ರೆಗೆ ಕರೆ ತಂದರು. ಒಂದು ದಿನ ಹುಡುಗ ತಾಯಿಯೊಡನೆ- 'ಅಮ್ಮಾ.....ನನಗೆ ನೆಗಡಿಯಾಗಿದೆ. ಇಂದು ನಾನು ಶಾಲೆಗೆ ಹೋಗುವುದಿಲ್ಲ'-ಎಂದ.

'ಆಗಲಿ, ಹೋಗಬೇಡ'-ಎಂದಳು ತಾಯಿ. ಆದರೆ ತಂದೆ ಅವನನ್ನು ಬಲವಂತದಿಂದ ಶಾಲೆಗೆ ಕಳುಹಿಸಿಯೇ ಬಿಟ್ಟ. ಶಾಲೆಗೆ ಹೋದಾಗ ಅವನಿಗೆ ಓಕರಿಕೆ ಉಂಟಾಯಿತು. ಅವನು ಮನೆಗೆ ಹಿಂದಿರುಗಿದ. ಆಗ ತಂದೆ ಛಲದಿಂದ ಮತ್ತೆ ಶಾಲಗೆ ಕಳುಹಿಸಿದ. ತಾಯಿ ಮಾತ್ರ 'ಬೇಡ...ಮನೆಯಲ್ಲೇ ಇರು' ಎಂದಳು. ಹೀಗೆ ಮಾತಾಪಿತರ ಭಿನ್ನಾಭಿಪ್ರಾಯದಿಂದ ಹುಡುಗನಿಗೆ ತುಂಬಾ ತೊಂದರೆ ಯಾಗುತ್ತದೆ. ಈಗ ಆ ಹುಡುಗನ ದುಃಸ್ಥಿತಿಯೇನೆಂದರೆ ಮನೆಯಲ್ಲಿದ್ದರೆ ನೆಗಡಿ;

ಶಾಲೆಗೆ ಹೋದರೆ ಓಕರಿಕೆ! ಇದು ಹುಡುಗನ ಮಾನಸಿಕ ವಿಕೃತಿಯ ಪರಿಣಾಮ.

ಇನ್ನೊಬ್ಬ ಹುಡುಗ ಡೈವೋರ್ಸ್ ಶಬ್ಧವನ್ನು ಕಲಿತುಕೊಂಡಿದ್ದ. ತಾಯಿ ಡೈವೋರ್ಸ್ ಮಾಡಿಕೊಂಡರೆ ತನ್ನ ಗತಿಯೇನೆಂದೇ ಆತ ಯಾವಾಗಲೂ ಹೆದರಿರುತ್ತಿದ್ದ. ತಮ್ಮ ತಂದೆ ತಾಯಿ ತೀರಿಹೋದರೆ ತಮಗಾರು ದಿಕ್ಕು!–ಎಂದು ೭೫% ರಷ್ಟು ಬಾಲಕರು ಹೆದರುತ್ತಾರೆ. ತಮ್ಮ ಅಸಹಾಯಸ್ಥಿತಿ ಹಾಗೂ ಸಾವಿನ ಭಯದ ಕಲ್ಪನೆಯಿಂದಲೇ ಅವರ ಮನಸ್ಸು ಕೆಟ್ಟುಹೋಗುತ್ತದೆ.

ನಮ್ಮ ತಾಯಿತಂದೆ ನಮ್ಮೊಡನೆ ವ್ಯವಹರಿಸುವ ರೀತಿಯಲ್ಲೇ ನಾವೂ ಇತರರೊಡನೆ ವ್ಯವಹರಿಸುತ್ತೇವೆ. ಆದ್ದರಿಂದ ಹುಡುಗರೊಡನೆ ವ್ಯವಹರಿಸುವಾಗ ನಾವು ತುಂಬಾ ಎಚ್ಚರಿಕೆಯಿಂದಿರಬೇಕು. ನಮ್ಮ ವ್ಯವಹಾರ ನಿರ್ದೋಷವೂ ಅತ್ಯುತ್ತಮವೂ ಆಗಿದ್ದರೆ ಹುಡುಗರೂ ಅದನ್ನನುಕರಿಸುವುದರಿಂದ ಬೇರಾವ ಸಮಸ್ಯೆಯೂ ತಲೆದೋರಲಾರದು.

ತಾಯಿತಂದೆ ತಮ್ಮ ಮಕ್ಕಳನ್ನು ಹಾರ್ಧಿಕವಾಗಿ ಪ್ರೀತಿಸುವುದಿಲ್ಲವೆಂದು ನಾನು ಆರೋಪಿಸಿದರೆ ಅವರು ಖಂಡಿತ ಸಿಟ್ಟಾಗುವರು. ಆದರೆ ನಿಜಸಂಗತಿಯೇನೆಂದರೆ ಮಕ್ಕಳ ಬಗ್ಗೆ ಅವರಲ್ಲಿ ವಾಸ್ತವಿಕ ಪ್ರೀತಿಯಿರುವುದಿಲ್ಲ. ಅದಕ್ಕಾಗಿ ತಾವೇನು ಮಾಡಬೇಕೆಂದು ತಿಳಿದುಕೊಂಡರೇನೇ ಎಲ್ಲ ತೊಂದರೆಗಳೂ ದೂರವಾಗುವುವು.

ಇಂದು ತಾಯಿ ತಂದೆಗಳು ಮಕ್ಕಳ ಬಗ್ಗೆ ಎರಡು ರೀತಿಯಿಂದ ತಮ್ಮ ಸುಳ್ಳು ಪ್ರೀತಿಯನ್ನು ತೋರ್ಪಡಿಸುತ್ತಾರೆ. ತಮ್ಮ ಅಧಿಕಾರ ಚಲಾಯಿಸುವುದು ಮೊದಲ ರೀತಿ; ಅತ್ಯಧಿಕ ಪ್ರೀತಿ ಪ್ರದರ್ಶನ ಎರಡನೇ ರೀತಿ. ಇವೆರಡೂ ಮಕ್ಕಳಿಗೆ ಕೇಡುಮಾಡುವವು.

ಹೊರಗೆ ಸೋನೆಮಳೆ ಸುರಿಯುತ್ತಿದೆ; ಆಹಾ ಎಷ್ಟು ಚಂದ! ಎಂದು ಯೋಚಿಸಿ ಹುಡುಗ ಅಂಗಳಕ್ಕಿಳಿಯುವ. ಮಗನಿಗೆ ನೆಗಡಿಯಾಗಿ ಜ್ವರ ಬರುವುದೆಂದು ಹೆದರಿ ಕೆಳಗಿಳಿಯದಂತೆ ತಂದೆ ಅವನನ್ನು ತಡೆಯುತ್ತಾನೆ. ತಂದೆ ತನ್ನನ್ನು ಮನೆಯಲ್ಲೇ ಸೆರೆಯಿಡುತ್ತಾರೆಂದು ಹುಡುಗನಿಗೆ ತಂದೆಯ ಬಗ್ಗೆ ಸಿಡುಕಾಗುತ್ತದೆ.

ಒಬ್ಬ ತನ್ನ ಮಗಳಿಗೆ ಹೊರಹೊರಡುವಾಗ ಯಾವಾಗಲೂ ಸ್ವೆಟರ್ ತೊಡಲೇಬೇಕೆಂದು ಅಪ್ಪಣೆ ವಿಧಿಸಿದ್ದ. ತಂದೆಯ ಕಟ್ಟಪ್ಪಣೆ ಮೀರಲಾರದೆ ಹುಡುಗಿ ಸ್ವೆಟರ್ ಧರಿಸುತ್ತಿದ್ದಳು. ಆದರದು ಅವಳಿಗೆ ಒಂದಿಷ್ಟೂ ಒಗ್ಗುತ್ತಿರಲಿಲ್ಲ. ಕೊನೆಗೊಮ್ಮೆ ಅವಳೊಂದು ಉಪಾಯ ಹೂಡಿದಳು. ಮನೆಯಿಂದ ಹೊರಹೋಗವಾಗಲೇನೋ ಅವಳು ಸ್ವೆಟರ್ ತೊಟ್ಟುಕೊಳ್ಳುತ್ತಿದ್ದಳು. ಆದರೆ ತುಸುದೂರ ಹೋಗುತ್ತಲೇ ಅದನ್ನು ಕಳಚಿ ಚೀಲಕ್ಕೆ ತುರುಕುತಿದ್ದಳು. ಹಿಂದಿರುಗುವ ವೇಳೆಗೆ ಮನೆಯಿಂದ ಸ್ವಲ್ಪ ದೂರದಲ್ಲಿ ಅದನ್ನು ಮರಳಿ ತೊಡುತ್ತಿದ್ದಳು. ಈ ರೀತಿ ಸುಮಾರು ೨೦ ವರ್ಷಗಳ ತನಕ ಅವಳು ತಂದೆಯನ್ನು ಮೋಸಗೊಳಿಸುತ್ತಿದ್ದಳು. ತಾನು ತಂದೆಯನ್ನು ವಂಚಿಸುತ್ತಿದ್ದೇನೆಂದು ಆಕೆ ಮನದಲ್ಲೇ ಪರಿತಪಿಸುತ್ತಿದ್ದಳು ಕಟ್ಟಕಡೆಗೆ ತಂದೆ ಮೃತ್ಯುಶಯ್ಯೆಯಲ್ಲೊರಗಿದರು. ತಂದೆಯೆದುರಿಗೆ ಎಲ್ಲವನ್ನೂ

ಸ್ಪಷ್ಟವಾಗಿ ಹೇಳಬೇಕೆಂದು ಅವಳು ನಿರ್ಧರಿಸಿದರೂ ಸಾಹಸವಾಗಲಿಲ್ಲ. ತಂದೆ ಸತ್ತುಹೋದರು. ತಂದೆಯನ್ನು ವಂಚಿಸಿದ ವಿಚಾರ ಅವಳ ಮನದಿಂದ ದೂರವಾಗುತ್ತಲೇ ಇರಲಿಲ್ಲ. ಪರಿಣಾಮವಾಗಿ ಅವಳಿಗೆ ಕನಸು ಬೀಳತೊಡಗಿತು. ಕನಸಿನಲ್ಲಿ ತಂದೆ ಕಾಣಿಸಿಕೊಳ್ಳುತ್ತಿದ್ದರು. ಅವರೆದುರಿಗೆ ಬಾಯ್ದೆರೆಯಲು ಪ್ರಯತ್ನಿಸಿದರೂ ಅವಳಿಂದಾಗುತ್ತಿರಲಿಲ್ಲ. ಇದರ ಪರಿಣಾಮ ಅವಳ ಮೆದುಳಿನ ಮೇಲುಂಟಾಯಿತು. ಎಂ.ಬಿ.ಬಿ.ಎಸ್. ಪರೀಕ್ಷೆಗೆ ಕಟ್ಟಿದರೂ ಅವಳು ಪರೀಕ್ಷೆಗೆ ಕುಳಿತುಕೊಳ್ಳದಾದಳು.

'ಮಗೂ...ಬಿಸಿಲಿಗೆ ಹೋಗಬೇಡ. ಹೋದರೆ ಪೆಟ್ಟುತಿನ್ನುತ್ತೀ'-ಎಂದು ತಾಯಿ ತಂದೆ ಹೆಚ್ಚಾಗಿ ಮಕ್ಕಳನ್ನು ಹೆದರಿಸುವುದುಂಟು. ಮನೆಯಿಂದ ಹೊರಗೆ ಕಾಲಿಟ್ಟರೆ ತಮ್ಮ ಹುಡುಗ ಎಲ್ಲಿ ಕರಗಿ ಹೋಗುತ್ತಾನೋ ಎಂಬ ಚಿಂತೆ ಅವರಿಗೆ! ಈ ರೀತಿ ಅತಿಶಯ ಲಕ್ಷ್ಯದಿಂದಲೇ ಹುಡುಗ ಪೆದ್ದನೂ ಅಂಜುಕುಳಿಯು ಆಗುತ್ತಾನೆ.

ಅಳುತ್ತಿರುವ ಮಗುವನ್ನು ಸಮಾಧಾನ ಪಡಿಸಲು 'ಗುಮ್ಮ ಬರುತ್ತದೆ....ಗುಮ್ಮ ಬಂತು'-ಎಂದು ತಾಯಿ ಹೆದರಿಸುತ್ತಾಳೆ. ಆ ವೇಳೆ ಮಗು ಸುಮ್ಮನಾದರೂ ಮುಂದೆ ಅದಕ್ಕೆ ಶಾಶ್ವತವಾದ ಭಯ ಅಂಟಿಕೊಳ್ಳುತ್ತದೆ. ಕತ್ತಲಾದೊಡನೆಯೇ ಮನೆಯಿಂದ ಹೊರಗೆ ಕಾಲಿಡಲೂ ಆತ ಹೆದರುತ್ತಾನೆ. ಇದು ಸಣ್ಣ ಮಕ್ಕಳ ಮಾತಲ್ಲ-ದೊಡ್ಡವರಾದ ಬಳಿಕವೂ ಅವರ ಈ ದುಃಸ್ಥಿತಿ ತಪ್ಪುವುದಿಲ್ಲ.

ಬಾಲ್ಯದಲ್ಲಿ ಭೂತಪ್ರೇತಗಳ ಕತೆ ಕೇಳುವುದರಿಂದಲೂ ಅಸಹಜವಾದ ಭಯ ಮಕ್ಕಳಲ್ಲಿ ಮನೆಮಾಡುತ್ತದೆ. ಹೆಜ್ಜೆ ಹೆಜ್ಜೆಗೆ ಹೆದರುವ ಚಟ ಅವರಿಗಾಗುತ್ತದೆ. ಮುಂದೆ ಅವರು ನಿಷ್ಪ್ರಯೋಜಕರಾಗುತ್ತಾರೆ.

ಇಬ್ಬರು ಮಿತ್ರರು ಪರಸ್ಪರ ಹೊಂದಿಕೊಂಡು ಇರಬಲ್ಲರು. ಆದರೆ ಅಣ್ಣ ತಮ್ಮಂದಿರು ಮನೆಯಲ್ಲಿ ಹೊಂದಿಕೊಂಡು ಅದೇಕೆ ಇರುವುದಿಲ್ಲ! ಕಾರಣವೆನೆಂದರೆ ಮನೆಯಲ್ಲಿ ತಾಯಿ ತಂದೆ ಅವರನ್ನು ಸ್ಪರ್ಧೆ ಮತ್ಸರ, ಉಚ್ಚ ನೀಚಭಾವನೆ, ಪರಸ್ಪರ ತುಲನೆ-ಮೊದಲಾದ ಅನಿಶ್ಚಿತ ವ್ಯವಹಾರಕ್ಕೆ ಗುರಿಪಡಿಸಿ ಈ ಅನಿಷ್ಟ ಫಲ ದೊರೆಯುವಂತೆ ಮಾಡುತ್ತಾರೆ.

ಮನೆಯಲ್ಲಿ ಅತ್ತೆ ಸೊಸೆ ಕ್ಷುಲ್ಲಕ ಕಾರಣಕ್ಕಾಗಿ ಪರಸ್ಪರ ಜಗಳವಾಡುತ್ತಿರುತ್ತಾರೆ...ವೈಮನಸ್ಯ ಹೊಗೆಯಾಡುತ್ತಿರುತ್ತದೆ. ಅದರ ದುಷ್ಪ್ರಭಾವ ಮುಗ್ಧ ಮಕ್ಕಳ ಮೇಲೂ ಆಗುವುದರಲ್ಲಿ ಸಂದೇಹವೇನು?

ಸಾರಾಂಶವೇನೆಂದರೆ ಮಕ್ಕಳ ನಡತೆ ಕೆಡಲು ಹಿರಿಯರೇ ಮುಖ್ಯಕಾರಣರು. ಈ ದುಃಸ್ಥಿತಿಯನ್ನು ದೂರಗೊಳಿಸಬೇಕಾದರೆ, ಮಕ್ಕಳನ್ನು ಹೇಗೆ ಸಾಕಬೇಕೆಂದು ಪ್ರತಿಯೊಬ್ಬ ಪಾಲಕನೂ ಆಳವಾಗಿ ವಿಚಾರ ಮಾಡಬೇಕು.

ಅನು-ಬಳ್ಕೂರು ಸುಬ್ರಾಯ ಅಡಿಗ

ಸಾಭಾರ-ಪುಸ್ತಕ ಪ್ರಪಂಚ

* * *

ನನ್ನ ಶಾಲೆ ಸತ್ತು ಹೋಯಿತು!

-ಪ್ರೊ॥ ಅ. ಶ್ರೀಧರ

ಹೌದು, ಬೆಂಗಳೂರಿನ ಬಸವನಗುಡಿಯ ಹಳೆಯ ಪ್ರಾಥಮಿಕ ಶಾಲೆಗಳಲ್ಲೊಂದು. ಕನ್ನಡದಲ್ಲಿ ನನ್ನ ಮತ್ತು ನನ್ನಂತೆ ಸಾವಿರಾರು ಮಂದಿಯ ಮನದ ಭಾಷೆಯನ್ನು ಬಲಗೊಳಿಸಿದ, ಆಧುನಿಕ ಚಿಂತನೆಯನ್ನು ಕೂಡ ಸರಾಗವಾಗಿ ಮಾಡಲು ಕಲಿಸಿದ ಶಾಲೆಗೆ ವಿದ್ಯಾರ್ಥಿಗಳು ಸೇರದಿದ್ದ ಕಾರಣ ಮುಚ್ಚಲಾಯಿತಂತೆ. ಅಬ್ಬರ ಆಡಂಬರಗಳನ್ನು ಆಚರಿಸದೇ ಸೊರಗಿಹೋದ ಈ ಶಾಲೆಯಲ್ಲಿ ಖ್ಯಾತ ವಿಜ್ಞಾನಿ ಡಾ॥ಸಿ.ಎನ್.ರಾವ್. ರೊದ್ದಾಂ ನರಸಿಂಹ, ಪ್ರೊ ಎಚ್.ಎನ್. ಮಹಾಬಲ ಮುಂತಾದ ಅನೇಕರು ವಿದ್ಯಾರ್ಥಿಗಳಾಗಿದ್ದರು. ಈ ಮಾದರಿಯ ಶಾಲೆಯ ಅಂತ್ಯಗಳು ಒಂದು ಸಾಂಕ್ರಾಮಿಕವಾಗಲಿದೆ. ನಾಡ ಭಾಷೆಯಲ್ಲಿ ಪ್ರಾಥಮಿಕ ಮಟ್ಟದ ಶಿಕ್ಷಣವನ್ನು ಸಹ ಉತ್ತೇಜಿಸಲು ನಮ್ಮ ಸರ್ಕಾರಗಳಿಂದ ಸಾಧ್ಯವಿಲ್ಲದಾದಾಗ ಹೀಗಾಗುತ್ತದೆ.

೨೩-೮-೧೯೩೭ ರ ಹರಿಜನ ಪತ್ರಿಕೆಯಲ್ಲಿ ಮಹಾತ್ಮ ಗಾಂಧಿಯವರು ಕಳಕಳಿಯಿಂದ ಹೀಗೆನ್ನುತ್ತಾರೆ: 'ತಾಯಿಯ ಎದೆ ಹಾಲಿಗೆ ಮಗು ಆಶ್ರಯಿಸುವಂತೆ ನನ್ನ ಮಾತೃಭಾಷೆಗೆ ತೆಕ್ಕೆ ಬೀಳುತ್ತೇನೆ. ಇಂಗ್ಲೀಷ್ ಒಂದು ಪ್ರಬುದ್ಧ ಭಾಷೆ ನಿಜವಿರಬಹುದು. ಆದರೆ ನಮ್ಮ ದಾಸ್ಯ ಮನೋಭಾವದಿಂದ ಇಂಗ್ಲೀಷ್ ಭಾಷೆ ಅನಿವಾರ್ಯವೆಂಬ ಅಸಹಾಯಕತೆಯನ್ನು ಒಲಿಸಿಕೊಂಡಿದ್ದೇವೆ'... ಸರ್ಕಾರದ ಆದ್ಯ ಕರ್ತವ್ಯಗಳಲ್ಲಿ ಮುಖ್ಯವಾದುದ್ದೆಂದರೆ ನಮ್ಮ ಸಂಸ್ಕೃತಿಯ ಸಿರಿವಂತಿಗೆ ಹೊತ್ತಿರುವ ಭಾಷೆಗಳಿಗೆ ಉತ್ತೇಜನ ನೀಡುವುದು ಮತ್ತು ಇಂಗ್ಲೀಷರ ಆಡಳಿತವನ್ನು ಹೊರದಬ್ಬಿದಂತೆ ಇಂಗ್ಲೀಷ್ ಭಾಷೆಯು ನಮ್ಮ ಸಾಂಸ್ಕೃತಿಕ ಏಳಿಗೆಯನ್ನು ಏರುಪೇರು ಮಾಡದಂತೆ ಹೊರಗಿಡಲೇ ಬೇಕಾಗುತ್ತದೆ.

ಶಿಕ್ಷಣ ಮಾಧ್ಯಮದ ಬಗ್ಗೆ ಅನವಶ್ಯಕ ಗೊಂದಲವನ್ನು ಉತ್ತೇಜಿಸಿದಂತೆ ಕಾಣಬರುತ್ತದೆ. ಮಕ್ಕಳ ಶಿಕ್ಷಣ ಮಾತೃಭಾಷೆಯಲ್ಲಿಯೇ ನಡೆಯುವುದು ಸರಿಯೆಂಬ ಅಭಿಪ್ರಾಯವನ್ನು ನಮ್ಮ ಸರ್ವೋಚ್ಚ ನ್ಯಾಯಾಲಯ ಮಾತ್ರವಲ್ಲ, ಅದಕ್ಕಿಂತಲೂ ಮುಂಚಿತವಾಗಿಯೇ ಯುನೆಸ್ಕೊ ವ್ಯಕ್ತಪಡಿಸಿದೆ.ಅದೂ ಸಹ ೧೯೫೩ ರ ಸಮಯದಲ್ಲಿಯೇ ಮಾತೃ ಭಾಷೆಯ ಮೂಲಕ ಪ್ರಾಥಮಿಕ ಶಿಕ್ಷಣ ಇರಬೇಕು ಎಂದು ಹೇಳಿರುತ್ತದೆ.

ಮಕ್ಕಳಾಡುವ ಮನೆಯ ಮಾತುಗಳು ಕೇವಲ 'ಅಡುಗೆ ಮನೆಯ' ಭಾಷೆಯಲ್ಲ. ಕಲಿಯದೇ ಸಹಜವಾಗಿ ಒಲಿದು ಬಂದಿರುವ ವ್ಯಾಕರಣ ಬದ್ಧವಾದ ಭವ್ಯ ಮಾನಸಿಕ ಶಕ್ತಿ, ಭಾಷೆಯನ್ನು ಕಲಿಯುವುದು ಎಂದರೆ ಭಾಷೆಯಲ್ಲಿ ಅಡಗಿರುವ ವ್ಯಾಕರಣ ಇತ್ಯಾದಿ ನಿಯಮಗಳನ್ನು ಕಲಿಯುವುದು. ಮಾತೃಭಾಷೆಯಲ್ಲಿ ವ್ಯಾಕರಣದ ನಿಯಮಗಳು ಹುಟ್ಟಿನೊಂದಿಗೆ ಮೂಡಿ ಬಂದಿರುತ್ತವೆಯೆನ್ನತ್ತಾರೆ ಪ್ರಖ್ಯಾತ ಭಾಷಾ ಶಾಸ್ತ್ರಜ್ಞ ಎನ್.ಚಾಮ್‌ಸ್ಕಿ. ಭಾಷೆಯನ್ನು ಸರಾಗವಾಗಿ ಬಳಸಲು ಬೇಕಾದ (ವ್ಯಾಕರಣ) ಸೂತ್ರಗಳು ಮಿದುಳಿನಲ್ಲಿ ಮೂಡಿರುತ್ತವೆ. ಭಾಷಾ ಪರಿಸರದಲ್ಲಿ ಹುಟ್ಟಿ ಬೆಳೆಯುವ ಮಕ್ಕಳು ಇವುಗಳನ್ನುಸಹಜವಾಗಿ ಸಂಪರ್ಕ ಮತ್ತು ಅರಿವಿಗಾಗಿ ಬಳಸಿಕೊಳ್ಳುತ್ತಾರೆ. ಇತರರ ಸಹಾಯವಿಲ್ಲದೆಯೆ ಮಾತನಾಡುವ ಪ್ರೌಢಿಮೆಯನ್ನು ಗಳಿಸಿಕೊಂಡಿರುತ್ತಾರೆ, ಇದು ಶಾಲೆಯಲ್ಲಿ ಕಲಿಸುವ ಭಾಷೆಗಿಂತ ಬಲಿಷ್ಠವಾಗಿದ್ದು ಕಲಿಕೆಯ ಬುನಾದಿಯಾಗಿರುತ್ತದೆ. ಹೆಸರಾಂತ ಶಿಕ್ಷಣ ತಜ್ಞ ಶಿಶು ಮನೋವಿಜ್ಞಾನಿ ಜೋನ್ ಪಿಯಾಝೆ ಪ್ರಕಾರ ಮಗುವು ಶಾಲೆಗೆ ಬರುವ

ಮುನ್ನವೇ ವ್ಯಕ್ತಿ ವಸ್ತು ಮತ್ತು ನಿಸರ್ಗದ ಬಗ್ಗೆ ತನ್ನದೇ ಆದ ರೀತಿಯಲ್ಲಿ ಮಾಹಿತಿಯನ್ನು ಸಂಗ್ರಹಿಸಿಟ್ಟು ಕೊಂಡಿರುತ್ತದೆ. ಇದು ಮುಂದೆ ಕಲಿಕೆಯನ್ನು ಸರಾಗಗೊಳಿಸುತ್ತದೆ. ಪ್ರಾಥಮಿಕ ಹಂತದಲ್ಲಿ ಮನೆಯ ಅಥವಾ ಪರಿಸರದ ಭಾಷೆಯ ಮೂಲಕ ಕಲಿಕೆಯನ್ನು ನೀಡುವ ಕ್ರಮದಿಂದ ಮಗುವಿನ ಅರಿವಿಗೆ ಸಂಬಂಧಿಸಿದ ಮಾನಸಿಕ ಶಕ್ತಿಗಳನ್ನು ಸರಾಗವಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತದೆ. ಉತ್ತಮ ಶಿಕ್ಷಣದ ಅಡಿಪಾಯ ಮಾತೃಭಾಷೆ ಎನ್ನುವುದರಲ್ಲಿ ಸಂದೇಹವೇ ಇಲ್ಲವೆನ್ನುವುದು ಮನೋವಿಜ್ಞಾನಿಗಳ ಅಭಿಪ್ರಾಯವೂ ಆಗಿರುತ್ತದೆ.

ಮಕ್ಕಳು ಹೇಳಿಕೊಟ್ಟಿದ್ದೆಲ್ಲವನ್ನು ಬಹಳ ಸುಲಭವಾಗಿ ಕಲಿಯುತ್ತವೆ. ಮತ್ತು ಹೊಂದಾಣಿಕೆಯ ಸಾಮರ್ಥ್ಯ ಚುರುಕಾಗಿರುವುದರಿಂದ ಯಾವ ಮಾಧ್ಯಮದಲ್ಲಿ ಬೇಕಾದರೂ ಕಲಿಯಬಲ್ಲರು ಎನ್ನುವ ವಾದ ಅವೈಜ್ಞಾನಿಕ. ಏಕೆಂದರೆ, ಹೊಸ ವಿಷಯವನ್ನು ತಿಳಿಯಲು ಮಕ್ಕಳು ತಮ್ಮಲ್ಲಿ ಈಗಾಗಲೇ ಮೂಡಿರುವ ಒಂದು ಭಾಷೆಯಲ್ಲಿರುವುದನ್ನು ಮರೆಯಬೇಕು ಮತ್ತು ಪ್ರಯತ್ನಗಳ ಮೂಲಕ ಎಲ್ಲವನ್ನು ಹೊಸದಾಗಿ ಕಲಿಯಬೇಕಾಗುತ್ತದೆ. ಅಂದರೆ, ಇಂಗ್ಲೀಷ್ ಭಾಷೆಯಲ್ಲಿ ಅರಿವಾಗಬೇಕಾದರೆ ಮೊದಲ ಭಾಷೆಯ ಮೂಲಕವೇ ಸಾಗಬೇಕಾಗುತ್ತದೆ. ಈ ಕಾರಣದಿಂದಲೇ ಸಣ್ಣ ಪುಟ್ಟ ಇಂಗ್ಲೀಷ್ ಪದಗಳು ವಾಕ್ಯಗಳು ಪ್ರಾರಂಭದಲ್ಲಿ ಸುಲಭವಾಗಿ ಕಂಡು ಬಂದರೂ ನಂತರದ ಹಂತಗಳಲ್ಲಿ ಬಳಕೆಯ ವಿಧಾನ, ಉದ್ದೇಶ ಮತ್ತು ಸರಿ ತಪ್ಪುಗಳ ಬಗ್ಗೆ ಮಗುವು ನಿತ್ಯವೂ ಜಿಜ್ಞಾಸೆ ಎದುರಿಸಬೇಕಾಗುತ್ತದೆ. ಇದರ ಪರಿಣಾಮದಿಂದಾಗಿ ಕಲಿಕೆಯಲ್ಲಿ ಹಿನ್ನೆಡೆ ಮತ್ತು ಮಾನಸಿಕ ಶಕ್ತಿಗಳ ಮೇಲೆ ಒತ್ತಡವುಂಟಾಗುತ್ತದೆ. ಶಾಲೆಯಲ್ಲಿ ಇಂಗ್ಲೀಷ್ ಕಲಿಕೆಯ ವಿಧಾನಗಳನ್ನು ಸರಿಯಾದ ರೀತಿಯಲ್ಲಿ ಪರಿಚಯಿಸದಿದ್ದಾಗ ಮಕ್ಕಳು ಶಾಲೆಯನ್ನು ಅರ್ಧಕ್ಕೆ ಬಿಟ್ಟರೂ ಬಿಡಬಹುದು. ಇಂತಹ ಪರಿಣಾಮ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚಾಗುವ ಸಾಧ್ಯತೆಗಳಿವೆ.

ಮಾತೃಭಾಷೆ ಮತ್ತು ಶಿಕ್ಷಣ ಪಡೆಯಲು ಬಳಸುವ ಭಾಷೆ, ಪ್ರಾಥಮಿಕ ಹಂತದಲ್ಲಂತೂ, ಒಂದೇ ಆಗಿರಬೇಕು. ಶಿಕ್ಷಣದ ಬಗ್ಗೆ ಇರುವ ಮೂಢನಂಬಿಕೆಗಳನ್ನು ತಡೆಯುವ ಶಕ್ತಿ ಮತ್ತು ಯುಕ್ತಿಯನ್ನು ಸರ್ಕಾರ ಹೊಂದಿರಲೇಬೇಕಾಗುತ್ತದೆ. ಘೋಷಣೆಗಳು, ಅಭಿಪ್ರಾಯಗಳು ಮಕ್ಕಳ ಭವಿಷ್ಯವನ್ನು ಏರುಪೇರು ಮಾಡುವುದರ ಬಗ್ಗೆ ಹೊಣೆಗಾರಿಕೆಯಿರುವ ನಾಗರೀಕರೆಲ್ಲರೂ ಎಚ್ಚೆತ್ತುಕೊಳ್ಳಲೇಬೇಕು.

ಇಲ್ಲೊಂದು ಆದರ್ಶದ ಉದಾಹರಣೆ: ನನ್ನ ಗೆಳೆಯರೊಬ್ಬರ ಮನೆಯ ಮಾತು ಕನ್ನಡವಲ್ಲ. ಮನೆಯ ಸುತ್ತಲಿನ ಮಾತು ಕನ್ನಡ. ಶಾಲೆಯಲ್ಲಿ ಕಲಿತದ್ದು ಮತ್ತು ಬಳಸುವ ಭಾಷೆ ಇಂಗ್ಲೀಷ್. ಅವರ ಉದ್ದಿಮೆಯ ಭಾಷೆ ಪ್ರಮುಖವಾಗಿ ಕನ್ನಡ. ಕನ್ನಡ ಮಾತನಾಡಲು ಬರುತ್ತಿತ್ತು; ಆದರೆ ಪರಿಣಿತಿ ಇರಲಿಲ್ಲ. ಆದ್ದರಿಂದ ಉದ್ದಿಮೆಯ ಮುಖ್ಯಸ್ಥರಾಗಿರಲು ಮನಸ್ಸಾಕ್ಷಿ ಒಪ್ಪಲಿಲ್ಲ. ಹೀಗಾಗಿ ಕೇವಲ ಎರಡು ಮೂರು ವರ್ಷಗಳ ಅವಧಿಯಲ್ಲಿ ಸಾಹಸ ಪಟ್ಟು ಉತ್ತಮ ಕನ್ನಡವನ್ನು ಕಲಿತರು. ಕನ್ನಡವನ್ನು ಓದಿ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಅವರ ಮಾನಸಿಕತೆಯಲ್ಲಿಯೇ ಬದಲಾವಣೆ ತಂದಿದೆಯೆಂದು ಹೆಮ್ಮೆಪಡುತ್ತಾರೆ. ಇದನ್ನು ಮೊದಲೇ ಮಾಡಬೇಕಿತ್ತು ಎಂದು ಹೇಳುತ್ತ ತಮ್ಮ ಮಕ್ಕಳು ಈ ಸಮಸ್ಯೆ ಎದುರಿಸದಿರಲಿ ಎಂದು ಕನ್ನಡ ಕಲಿಸುತ್ತಿದ್ದಾರೆ. ಕನ್ನಡ ಶಾಲೆಗಳನ್ನು ಸಾಯಿಸುವ ಭಾಷಾ ಹಂತಕರು ಯಾರಾದರೂ ಸರಿ ಅವರನ್ನು ತಡೆಗಟ್ಟಲೇ ಬೇಕು.

* * *

ರೈಲಿನ ಡಬ್ಬಿಯಲ್ಲಿ ಒಂದು ಶಾಲೆ!

-ತೆತ್ಸೂಕೊ ಕುರೊಯಾನಗಿ

ತೆತ್ಸೂಕೊ ಕುರೊಯಾನಗಿ ಜಪಾನ್ ದೇಶದ ಸುಪ್ರಸಿದ್ಧ ದೂರದರ್ಶನ ತಾರೆ. ಅವರು ತಮ್ಮ ಆತ್ಮಚರಿತ್ರೆಯೊಂದನ್ನು ಬರೆದಿದ್ದಾರೆ. ಆ ಆತ್ಮ ಚರಿತ್ರೆಯ ಹೆಸರು "ಟುಟ್ಟೊ-ಶಾನ್ ಕಿಟಕಿಯ ಬಳಿ ಆ ಚಿಕ್ಕ ಬಾಲಕಿ". ಎರಡನೆ ಮಹಾಯುದ್ಧದ ಸಮಯದಲ್ಲಿ ಬೆಳೆಯುತ್ತಿರುವ ಮಗುವಾಗಿ ತಾನು ಓದಿದ್ದ ವಿಶಿಷ್ಠವಾದ ಶಾಲೆಯ ಬಗ್ಗೆ ಬಹು ಪ್ರೀತಿಯಿಂದ ತೆತ್ಸೂಕೊ ಬರೆಯುತ್ತಾರೆ. ತೆತ್ಸೂಕೊ ಕುರೊಯಾನಗಿ ಬಾಲಕಿಯಾಗಿದ್ದಾಗ ಅವರನ್ನು ಟುಟ್ಟೊ-ಶಾನ್ ಎಂದು ಕರೆಯುತ್ತಿದ್ದರು. ಮೋಡಿ ಮಾಡುವಂತ ಈ ಶಾಲೆಗೆ ಅವರು ಆಕಸ್ಮಿಕವಾಗಿ ಬಂದು ಸೇರಿದರು. ಅವರು ಓದುತ್ತಿದ್ದ ಮೊದಲ ಶಾಲೆಯಿಂದ ಅವರ ಜೀವನದ ಬಹು ಪ್ರಾರಂಭದ ಅವಸ್ಥೆಯಲ್ಲಿಯೆ ಅಂದರೆ ಒಂದನೆ ತರಗತಿಯಿಂದಲೆ ಹೊರದಬ್ಬಲ್ಪಟ್ಟಿದ್ದರು! ಅವರ ಅಧ್ಯಾಪಕಿ ಮತ್ತು ಇತರ ತರಗತಿಗಳ ಅಧ್ಯಾಪಕಿಯರು ಈ ಬಾಲಕಿ ಅತ್ಯಂತ ತುಂಟಿಯೆಂದು ಭಾವಿಸಿದ್ದರು. ತರಗತಿಯ ಗಮನವನ್ನು ಬೇರೆಡೆಗೆ ಸೆಳೆಯುವಂತ ತುಂಟಾಟ. ಅವರು ಶಾಲಾ ಕಿಟಕಿಯ ಬಳಿ ನಿಲ್ಲುತ್ತಿದ್ದರು ಬೀದಿಯಲ್ಲಿ ಹೋಗುತ್ತಿದ್ದ ಬಿಕ್ಷೆ ಬೇಡುವ ವಾದ್ಯಗಾರರನ್ನು ಒಳಗೆ ಬರುವಂತೆ ಮಾಡಿ ತಮ್ಮ ತರಗತಿಯ ಮಕ್ಕಳಿಗೆ ವಾದ್ಯನುಡಿಸುವಂತೆ ಮಾಡುತ್ತಿದ್ದರು. ಅಥವಾ ಅವರು ಕುಳಿತುಕೊಳ್ಳುತ್ತಿದ್ದ ಮೇಜಿನ ತೆಗೆದು-ಮುಚ್ಚಲು ಸಾಧ್ಯವಾಗಿದ್ದ ಮೇಲ್ಭಾಗವನ್ನು ಕೇವಲ ಆಟಕ್ಕಾಗಿ ಇಡೀ ದಿನ ಅದನ್ನು ಮುಚ್ಚಿ-ತೆರೆದು ಮಾಡುತ್ತಿದ್ದರು. ಹೀಗೆ ಮಾಡುವುದರಿಂದ ಬಡಪಾಯಿ ಅಧ್ಯಾಪಕಿಗೆ ಹುಚ್ಚು ಹಿಡಿಯುವುದು ಮಾತ್ರ ಬಾಕಿ ಇರುತ್ತಿತ್ತು. ಆದರೆ ಅದೃಷ್ಟವಶಾತ್ ಟುಟ್ಟೊ-ಶಾನ್‌ನ ತಾಯಿ ಕಲ್ಪನಾಲೊಕದಲ್ಲಿ ವಿಹರಿಸುವ ತಮ್ಮ ಮಗಳ ಸಮಸ್ಯೆ ಏನೆಂಬುದನ್ನು ಅರಿತಿದ್ದರು. ಮಗಳ ಸಮಸ್ಯೆ ಇದ್ದುದು ಆ ಶಾಲೆಯಲ್ಲಿದ್ದ ನಿಸ್ಸಾರವಾದ ವಾತಾವರಣವೇ ಸಮಸ್ಯೆಯೆಂದು ಅರಿತಿದ್ದಳು. ಆದ್ದರಿಂದ ಆ ತಾಯಿ ತಮ್ಮ ಮಗಳ ಹೊರದಬ್ಬುವಿಕೆಯ ಬಗ್ಗೆ ಚಕಾರವೆತ್ತದೆ ಟುಟ್ಟೊ-ಶಾನ್‌ಳನ್ನು ಹೆಚ್ಚು ಸೂಕ್ತವಾದ ಶಾಲೆಗೆ ಸೇರಿಸಿದಳು. ಹೊಸ ಶಾಲೆಯಲ್ಲಿ ಪ್ರವೇಶಿಸುವಾಗ ಆ ಶಾಲೆಯ ಸುತ್ತನಿಂತಿದ್ದ ರೈಲುಡಬ್ಬಿಗಳನ್ನು ನೋಡಿ ತಾವೆಷ್ಟು ಉತ್ತೇಜಿತರಾದರೆಂದು ತಮ್ಮ ಆತ್ಮಚರಿತ್ರೆಯಲ್ಲಿ ತೆತ್ಸುಕೊ ಬರೆದಿದ್ದಾರೆ. ಪ್ರತಿಯೊಂದು ರೈಲುಡಬ್ಬಿಯು ಒಂದು ತರಗತಿಯಾಗಿತ್ತು!!! ಮುಂದೆ ಟೊಮಾಯಿ ಎಂಬ ಈ ಶಾಲೆಯಲ್ಲಿ ಮೊದಲ ವರ್ಷದ ಅವಧಿಯಲ್ಲಿ ಆ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಕೊಬಾಯಾಷಿ ಒಂದು ಗ್ರಂಥಾಲಯವನ್ನು ಸೇರಿಸಬೇಕೆಂದು ಬಯಸಿದರು ಅವರು

ಇನ್ನೊಂದು ರೈಲುಡಬ್ಬಿಯನ್ನು ಪಡೆದುಕೊಂಡರು. ಅದನ್ನು ಪುಸ್ತಕಗಳಿಂದ ತುಂಬಿದರು ಆಗ ಶಾಲಾ ಮಕ್ಕಳೆಲ್ಲ ಎಷ್ಟೊಂದು ಉತ್ತೇಜಿತರಾಗಿದ್ದರೆಂದರೆ ಅವರೆಲ್ಲರೂ ತಮ್ಮ ಶಾಲಾಗ್ರಂಥಾಲಯ ಬರುವುದನ್ನು ವೀಕ್ಷಿಸುವುದಕ್ಕಾಗಿ ಆ ರಾತ್ರಿಯನ್ನು ಶಾಲೆಯಲ್ಲಿಯೆ ಕಳೆಯುವುದಕ್ಕೊಸ್ಕರ ತಮ್ಮ ತಂದೆ-ತಾಯಿಯಿಂದ ಅನುಮತಿಯನ್ನು ಪಡೆದರು. ಅದು ಹತ್ತಿರದ ರೈಲು ನಿಲ್ದಾಣಕ್ಕೆ ಪ್ರಯಾಣ ಮಾಡಿದ ಮೇಲೆ ಆ ರೈಲುಡಬ್ಬಿಯನ್ನು ಬೆಳಗಿನಜಾವ ಶಾಲೆಗೆ ಎತ್ತುಗಳಿಂದ ಎಳೆದು ತರಲಾಯಿತು!! ಈ ಶಾಲೆಯಲ್ಲಿ ಮುಖ್ಯೋಪಾಧ್ಯಾಯರು ಎಲ್ಲವನ್ನು ತಮ್ಮ ಇಚ್ಛಾನುಸಾರ ಮಾಡುತ್ತಿದ್ದರು. ಟುಟ್ಟೊ-ಶಾನ್ ಈ ಶಾಲೆಗೆ ಸಂದರ್ಶನಕ್ಕಾಗಿ ಬಂದಳು. ಇಷ್ಟ ಬಂದಷ್ಟು ಗಂಟೆ ಕಾಲ ತನ್ನೊಂದಿಗೆ ಮಾತನಾಡಲು ಕೊಬೊಯಾಷಿ ಟುಟ್ಟೊಶಾನ್‌ಗೆ ಅವಕಾಶ ಮಾಡಿಕೊಟ್ಟರು. ಟುಟ್ಟೊಶಾನ್ ತಲೆಹರಟೆಯ ಸ್ವಭಾವದ ಬಾಲಕಿಯಾಗಿದ್ದರಿಂದ ಮುಖ್ಯೋಪಾಧ್ಯಾಯರೊಂದಿಗಿನ ಅವರ ಸಂದರ್ಶನ ನಾಲ್ಕುಗಂಟೆಗಳ ಕಾಲ ನಡೆಯಿತು!!! ಈ ಸಂದರ್ಶನದ ನಂತರ ಟುಟ್ಟೊಶಾನ್‌ಳನ್ನು ಶಾಲೆಗೆ ಸೇರುವಂತೆ ಆಹ್ವಾನಿಸಲಾಯಿತು. ಇಲ್ಲಿ ಮಕ್ಕಳು ತಮಗೆ ಏನು ಇಷ್ಟವೊ ಅದನ್ನು ಕಲಿಯುಬಹುದಾಗಿತ್ತು. ಯಾವುದಾದರೊಂದು ಮಗುವು ವಿಜ್ಞಾನವನ್ನು ಇಷ್ಟಪಡುತ್ತಿದ್ದರೆ ತನ್ನ ಶಾಲೆಯ ಆ ದಿನವನ್ನು ಪ್ರಯೋಗಗಳಿಂದಲೆ ಪ್ರಾರಂಭಿಸಬಹುದಾಗಿತ್ತು. ಆನಂತರ ಬೇರೆ ವಿಷಯಗಳತ್ತ ಗಮನಹರಿಸಬಹುದಾಗಿತ್ತು. ಬೇರೆ ಮಕ್ಕಳು ಆ ಹುಡುಗನ ಪಕ್ಕ ಕುಳಿತುಕೊಂಡು ತಮಗಿಷ್ಟವಾದ ಭಾಷೆಯನ್ನು ಓದಬಹುದಾಗಿತ್ತು. ಅಥವಾ ಕಲಿಯಬಹುದಾಗಿತ್ತು! ಕೊಬೊಯಾಷಿಯ ಶಾಲೆಯಲ್ಲಿದ್ದ ಸರಿಸುಮಾರು ಐವತ್ತು ಮಕ್ಕಳಲ್ಲಿ ಅನೇಕ ಮಕ್ಕಳು ಶಾರೀರಕ ದೌರ್ಬಲ್ಯಗಳನ್ನು ಹೊಂದಿದ್ದರು ೧೯೪೦ ರ ದಶಕಗಳಲ್ಲಿ ಪೋಲಿಯೋ ಇನ್ನೂ ಪರಿಣಾಮಕಾರಿಯಾಗಿ ನಿಯಂತ್ರಣಕ್ಕೆ ಒಳಗಾಗದೆ ಇದ್ದಾಗ ಟುಟ್ಟೊಶಾನ್‌ಳ ಆತ್ಮೀಯ ಸ್ನೇಹಿತರು ಈ ಆಘಾತಕಾರಿ ಕಾಯಿಲೆಗೆ ತುತ್ತಾಗಿದ್ದಂತವರಾಗಿದ್ದರು.ಶಾಲಾ ಕ್ರೀಡಾ ಸ್ಪರ್ಧಾದಿನ ಬಂದಾಗ ಕೊಬೊಯಾಷಿ ಮಕ್ಕಳಿಗಾಗಿ ಅಡೆತಡೆ ಓಟವನ್ನು ಏರ್ಪಡಿಸಲು ತಮ್ಮ ಬುದ್ಧಿಯನ್ನೆಲ್ಲ ಖರ್ಚುಮಾಡುತ್ತಿದ್ದರು. ವಿಜ್ಞಾನದ ಪಾಠಗಳು ನಾಟಿ ಮಾಡುವುದರಿಂದ ಹಿಡಿದು ಸುಗ್ಗಿಮಾಡುವರೆಗಿನ ಎಲ್ಲ ಕ್ರಿಯಾ ಚಟುವಟಿಕೆಗಳನ್ನು ಹೊಂದಿದ್ದವು. ಈ ಚಟುವಟಿಕೆಗಳಿಗಾಗಿ ಪಕ್ಕದ ರೈತನ ಸಹಾಯವನ್ನು ಪಡೆಯಲಾಗುತ್ತಿತ್ತು! ಟೋಮಿಯೊ ಶಾಲೆಯಲ್ಲಿಯ ಪ್ರತಿಯೊಂದು ಘಟನೆಗೂ ತನ್ನದೆ ಆದ ರುಚಿ ಇರುತ್ತಿತ್ತು. ಜಲಪಾತದ ಬಳಿ ಪ್ರವಾಸ ಹೋದರೆ ಎಲ್ಲ ಮಕ್ಕಳಿಗೂ ಅಡಿಗೆ ಮಾಡುವಂಥ ಒಂದು ಅವಕಾಶ ದೊರೆಯುತ್ತಿತ್ತು! ಉರುವಲಿಗಾಗಿ ಕಟ್ಟಿಗೆಯನ್ನು ಸಂಗ್ರಹಿಸುವುದು, ತರಕಾರಿಗಳನ್ನು ಹೆಚ್ಚುವುದು, ಗುಂಡಿಗಳನ್ನು ತೋಡಿ ತಾತ್ಕಾಲಿಕ ಒಲೆಯನ್ನು ನಿರ್ಮಿಸುವುದು ನಂತರ ಹುಡುಗ-

ಹುಡುಗಿಯರು ಸೇರಿ ತಾವೇ ಅಡುಗೆಯನ್ನು ಮಾಡುವುದು. ಇತ್ಯಾದಿ ಎಲ್ಲ ಚಟುವಟಿಕೆಗಳಲ್ಲಿ ಮಕ್ಕಳು ಭಾಗವಹಿಸುತ್ತಿದ್ದರು. ಆಗ ಆ ಮಕ್ಕಳು ತಮ್ಮ ಇಡೀ ಜೀವನ ತಾವು ಮಾಡಿದ್ದ ಅಡುಗೆಯ ರುಚಿಯನ್ನು ನೆನಪಿಟ್ಟುಕೊಳ್ಳುತ್ತಿದ್ದರು! ಇಲ್ಲಿ ನಮ್ಮ ಮನಸ್ಸಿನ ಮೇಲೆ ಮೂಡಿಸುವ ಪ್ರಭಾವ ಕೊಬೊಯಾಷಿಯವರ ಅಮೋಘವಾದ ಸಹನೆ. ಯಾವುದು ಆಕರ್ಷಕವೆನಿಸುತ್ತದೊ ಅದರತ್ತ ನಗೆಯುವುದು ಟೊಟ್ಟೊಚಾನ್‌ಳ ಅಭ್ಯಾಸವಾಗಿತ್ತು. ಹಾಗಾಗಿ ಅವಳು ಆಗಾಗ್ಗೆ ತೊಂದರೆಗೆ ಸಿಕ್ಕಿಹಾಕಿಕೊಳ್ಳುತ್ತಿದ್ದಳು. ಒಂದು ಸಲ ಶಾಲೆಯಿಂದ ಮನೆಗೆ ಹೋಗುವಾಗ ಅವಳು ರಸ್ತೆಬದಿಯಲ್ಲಿದ್ದ ಮರಳುಗುಡ್ಡೆಯ ಮೇಲೆ ಖುಷಿಗಾಗಿ ನಗೆದಳು ಅವಳು ಹಾಗೆ ಜಿಗಿದಾಗ ಸೊಂಟದವರೆಗೆ ಮುಳುಗಿದಳು ಅದೊಂದು ಸಿಮೆಂಟಿನೊಂದಿಗೆ ಬೆರೆತ ಮರುಳು ಗುಡ್ಡೆಯೆಂದು ಅವಳಿಗೆ ತಿಳಿಯಿತು. ಅದೃಷ್ಟವಶಾತ್ ಆ ಸಮಯಕ್ಕೆ ಟುಟ್ಟೊಚಾನ್‌ಳನ್ನು ಹುಡುಕಿಕೊಂಡು ಅವಳ ತಾಯಿ ಅಲ್ಲಿಗೆ ಬಂದಳು. ಅವಳು ಮಗುವನ್ನು ಆ ರಾಡಿಯಿಂದ ಹೊರೆಗೆಳೆದಳು!!! ಒಂದು ದಿನ ಶಾಲೆಯಲ್ಲಿ ಟುಟ್ಟೊಚಾನ್ ನೆಲದ ಮೇಲೆ ಒಂದು ವರ್ತಮಾನ ಪತ್ರಿಕೆ ಬಿದ್ದಿರುವುದನ್ನು ನೋಡಿದಳು ಮತ್ತು ತನ್ನ ಸ್ವಭಾವಕ್ಕೆ ತಕ್ಕಂತೆ ಅವಳು ನೇರವಾಗಿ ಅದರ ಮೇಲೆ ನೆಗೆದಳು. ಕಾವಲುಗಾರ ಚರಂಡಿಯ ಮುಖದ ಮೇಲೆ ತಾತ್ಕಾಲಿಕವಾಗಿ ಮುಚ್ಚಿದ ಕಾಗದ ಅದಾಗಿತ್ತು. ಆದ್ದರಿಂದ ಟುಟ್ಟೊಚಾನ್ ಕೊಚ್ಚೆ ಮಡುವಿನಲ್ಲಿ ಬಿದ್ದಳು!!!! ಅವಳ ತಂದೆ-ತಾಯಿಗಳನ್ನು ಬರಹೇಳುವುದರ ಬದಲಾಗಿ ಕೊಬೊಯಾಷಿ ಅವಳನ್ನು ಚೆನ್ನಾಗಿ ನೀರಿನಿಂದ ತೊಳೆದರು.

ತೆತ್ಸೂಕೊ ಕುರೊಯಾನಗಿ ಅವರ ಆತ್ಮ ಚರಿತ್ರೆ ಬಿಸಿ ದೋಸೆಯಂತೆ ಖರ್ಚಾಯಿತು. ಅದು ಪ್ರಕಟಗೊಂಡ ಮೊದಲ ವರ್ಷವೆ ಜಪಾನ್‌ದೇಶವೊಂದರಲ್ಲಿಯೆ ನಾಲ್ಕುವರೆ ದಶಲಕ್ಷ ಪ್ರತಿಗಳು ಮಾರಾಟವಾದವು. ತೆತ್ಸೂಕೊ ಕುರೊಯಾನಗಿ ತಮ್ಮ ಪುಸ್ತಕದ ಮಾರಾಟದಿಂದ ಬಂದ ಹಣವನ್ನು ಕಿವುಡು ಮಕ್ಕಳ ರಂಗಾಯಣವನ್ನು ಪ್ರಾರಂಭಿಸುವುದಕ್ಕಾಗಿ ಖರ್ಚುಮಾಡಿದಳು. ಈ ಪ್ರಕಾರದ ಸಂಸ್ಥೆ ಜಪಾನ್‌ನಲ್ಲಿ ಇದೇ ಮೊದಲನೆಯದಾಗಿತ್ತು. ಆನಂತರ ಈ ಪುಸ್ತಕವು ಇಂಗ್ಲೀಷ್‌ನಲ್ಲಿ ತುರ್ಜುಮೆಗೊಂಡು ಅಂತರರಾಷ್ಟ್ರೀಯ ಮಟ್ಟದಲ್ಲಿ ಅತ್ಯಂತ ಜನಪ್ರಿಯಗೊಂಡಿತು.

ಪುಸ್ತಕಗಳ ಪ್ರಕಾಶನದ ಇತಿಹಾಸದಲ್ಲಿ ಟುಟ್ಟೊಚಾನ್‌ಳ ಕಥೆ ಮಕ್ಕಳ ಮೊಟ್ಟಮೊದಲ ಕಥಾಪುಸ್ತಕವೆಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಇದು ವಯಸ್ಕರಿಗೂ ಪ್ರಿಯವಾಯಿತು. ಜಪಾನಿನ ಶಿಕ್ಷಣ ಇಲಾಖೆಯು ಈ ಪುಸ್ತಕವನ್ನು ಎಲ್ಲರೂ ಓದಬೇಕೆಂದು ಶಿಫಾರಸ್ಸು ಮಾಡಿತು!!!.

ಪರಿಚಯ--ಕವಿತಾ ಮಂಥನ: ಡೆಕ್ಕನ್ ಹೆರಾಲ್ಡ್

ಅನು-ಸು.ಕೌ.

ಮಕ್ಕಳಿಗಾಗಿ ಎಂಥ ಶಿಕ್ಷಣ ಬೇಕು

–ವಿನೋಬಾ

[ಆಧುನಿಕ ಭಾರತದ ಋಷಿಯೆಂಬ ಹೆಸರಿಗೆ ಯೋಗ್ಯವಾಗಿದ್ದಂಥ ವ್ಯಕ್ತಿ ಆಚಾರ್ಯ ವಿನೋಬಾಭಾವೆಯವರು. ಅವರು ಘನಸಂಸ್ಕೃತ ವಿದ್ವಾಂಸರು. ಅಪಾರ ಲೋಕಾನುಭವವುಳ್ಳವರು. ಆಜೀವಬ್ರಹ್ಮಚಾರಿ. ಇವರು ಶಿಕ್ಷಣದ ಬಗ್ಗೆ ಹೊಂದಿದ್ದ ವಿಚಾರಗಳು ಬಹು ಮೂಲಭೂತವಾಗಿವೆ. ಅವುಗಳನ್ನು ಇಂದಿನ ಶಿಕ್ಷಣಕ್ರಮದಲ್ಲಿ ಅಳವಡಿಸುವುದು ಅಗತ್ಯವಾಗಿದೆ. ವಿನೋಬಾರ ಆ ವಿಚಾರಗಳನ್ನು ಈ ಕೆಳಗೆ ಶಿಕ್ಷಕರ ಮತ್ತು ತಂದೆ ತಾಯಿಗಳ ಗಮನಕ್ಕಾಗಿ ಸಂಗ್ರಹಿಸಿಕೊಡಲಾಗಿದೆ –ಸಂ]

ಶಿಕ್ಷಣದ ಮೂಲ ವಿಚಾರವನ್ನು ಹೀಗೆ ಸೂಚಿಸಬಹುದು.

೧. ಶಿಕ್ಷಣ ಜೀವನಕ್ಕಾಗಿ, ಜೀವನ ಮೂಲಕ, ಜೀವನ ಪರ್ಯಂತ.

೨. ಶಿಕ್ಷಣವೆಂದರೆ ಸಮಗ್ರ ವಿಕಾಸ.

೩. ಕೇವಲ ಅ ಆ ಇ ಈ ಕಲಿಯುವುದು ಶಿಕ್ಷಣವಲ್ಲ. ಶಿಕ್ಷಣವೆಂದರೆ ಸತ್ಯ ಶೋಧನೆಯ ವಿವೇಕ.

೪. ಶಿಕ್ಷಣ ನಮ್ಮ ಪರಂಪರೆಯನ್ನು ನೆನೆಪಿಸಬೇಕು.

೫. ಶೋಷಣ ರಹಿತ ನವ ಸಮಾಜದ ರಚನೆಯೇ ಶಿಕ್ಷಣದ ಗುರಿ.

೬. ಶಿಕ್ಷಣ ಬುದ್ಧಿಯನ್ನು ಮಾತ್ರವಲ್ಲ, ಹೃದಯವನ್ನೂ ವಿಕಾಸಗೊಳಿಸಬೇಕು. ಇದು ಸತ್ಸಂಗ ಹಾಗೂ ಸಂಯಮ ಸಾಧನೆಯಿಂದ ಮಾತ್ರ ಸಾಧ್ಯ.

೭. ಶಿಕ್ಷಣದಲ್ಲಿ ಶ್ರಮನಿಷ್ಠೆಗೆ ಪ್ರಧಾನ ಸ್ಥಾನ. ಸಮಾಜೋಪಯೋಗವಾದ ಉದ್ಯೋಗದ ಮೂಲಕ ವಿದ್ಯಾರ್ಥಿಯ ಪೂರ್ಣ ವಿಕಾಸ ಸಾಧ್ಯ. ಕರ್ಮಜ್ಞಾನಗಳ ಸಮನ್ವಯವೇ ಶಿಕ್ಷಣ.

೮. ಧರ್ಮಶಿಕ್ಷಣ ಸರ್ವಧರ್ಮ ಸಮಾನತ್ವದ ಆಧಾರದ ಮೇಲೆಯೇ ಇರಬೇಕು.

೯. ತಾಯಿನುಡಿಯೇ ಶಿಕ್ಷಣ ಮಾಧ್ಯಮವಾಗಬೇಕು.

೧೦. ಶಿಕ್ಷಣದ ಗುರಿ ಅನಾಸಕ್ತಸೇವೆ.

ಮೇಲೆ ವಿವರಿಸಿರುವ ನಯೀ ತಾಲೀಂನ ಶಿಕ್ಷಣ, ದೇಶದ ಆದ್ಯಂತ ವ್ಯಾಪಿಸಿದರೆ ಯುವಕ ಯುವತಿಯರು ಉತ್ತಮವಾದ ಗ್ರಾಮೀಣ ಸಂಸ್ಕೃತಿಯ ಹಿನ್ನೆಲೆಯಲ್ಲಿ, ಉತ್ಪಾದಕ ಶ್ರಮಜೀವನ ಮೂಲಕ ವಿವೇಕವನ್ನು ಪಡೆದು, ಸ್ವಾವಲಂಬನ ಸೇವಾ ಮನೋಧರ್ಮ ಉಳ್ಳವರಾಗಿ ಜೀವನ ರಂಗದಲ್ಲಿ ಅಹಿಂಸೆಯನ್ನು ಪಾಲಿಸುತ್ತಾ, ನೂತನ ಯುಗದ ಆರಂಭಕರಾಗುವರು, ಇದು ನಯೀ ತಾಲೀಂನ ಕನಸು.

***

ಮಕ್ಕಳ ಶಿಕ್ಷಣದಲ್ಲಿ ಹೆತ್ತವರ ಹೊಣೆ.

-ಶೋಭಾ ಪದ್ಮರಾಜ್

ಇಂದಿನ ಕಂಪ್ಯೂಟರ್ ಯುಗದಲ್ಲಿ ಇಂಟರ್‌ನೆಟ್‌ನಲ್ಲೇ ಮದುವೆಯಾಗುವುದಾದರೆ, ಆ ಇಂಟರ್‌ನೆಟ್ ಮೂಲಕ ಹುಟ್ಟುವ ಪ್ರೀತಿ ಪ್ರೇಮಗಳಿಂದ ಸೃಷ್ಟಿಯಾಗುವ ಕಂದಮ್ಮಗಳಿಗೆ ತೋರಿಸುವ ಪ್ರೀತಿ ವಾತ್ಸಲ್ಯಕ್ಕೆ ಬೆಲೆಯೇ ಇಲ್ಲದಂತಹ ಪರಿಸ್ಥಿತಿ ಬಂದಂತಾಗುತ್ತದೆ.

ತಂದೆ-ತಾಯಿ ಇಬ್ಬರೂ ಮನೆ ಬಿಟ್ಟು ಹೊರಗೆ ದುಡಿಯಲೇಬೇಕಾದ ಸಂದಿಗ್ಧತೆ. ಮಕ್ಕಳನ್ನು ಕೆಲಸದ ಆಳುಗಳ ಕೈಗೆ ಕೊಡಬೇಕಾದ ಅನಿವಾರ್ಯತೆ. ಮಕ್ಕಳಿಗೆ ಮುಖ್ಯವಾಗಿ ಸಿಗಬೇಕಾದ ಆರೋಗ್ಯ, ಶಿಕ್ಷಣ, ಶಿಸ್ತು, ಕಾಳಜಿಯನ್ನೆಲ್ಲಾ ಹೆತ್ತವರೇ ಮರೆತು ಬಿಡುವಂತಹ ಬೇಜವಾಬ್ದಾರಿತನದ ಅಥವಾ ಮೂರ್ಖತನದ ಪರಮಾವಧಿಯಿಂದ ಮಕ್ಕಳು ಶಿಕ್ಷಣವಿದ್ದೂ ಅವಿದ್ಯಾವಂತರಂತೆ ಬೆಳೆಯಬೇಕಾಗಿದೆ. ಮನೆ ಕೆಲಸದವರು ಮಕ್ಕಳಿಗೆ ಸ್ನಾನ ಮಾಡಿಸಬೇಕು, ಬಟ್ಟೆಬರೆ ಹಾಕಬೇಕು, ಪುಸ್ತಕ ಚೀಲ ಸಿದ್ಧಪಡಿಸಬೇಕು, ಟಿಫಿನ್ ತುಂಬಿಸಬೇಕು ಹೀಗೆ ಮಕ್ಕಳಿಗೆ ತಿಂಡಿ ತಿನ್ನಿಸುವುದರಿಂದ ಮಕ್ಕಳನ್ನು ನಿದ್ದೆ ಮಾಡಿಸುವ ತನಕವೂ ದಿನಚರಿ ಬೆಳೆಯುತ್ತದೆ.

ಮದುವೆಯಾಗಿ ಮಕ್ಕಳಿಗೆ ಜನ್ಮಕೊಟ್ಟರೆ ನಮ್ಮ ಕೆಲಸ ಮುಗಿಯಿತೆಂದುಕೊಂಡು ದುಡಿಯುವ ಮಾಡರ್ನ್ ಗಂಡ ಹೆಂಡತಿಯರು ಮಕ್ಕಳಿಗೆ ಹುಟ್ಟಿಸಿದ ತಪ್ಪಿಗೆ 'ಆಂಗ್ಲ ವಿದ್ಯಾಭ್ಯಾಸ' ಕೊಡಿಸುತ್ತಾರೆ. ತಂದೆ ತಾಯಿಯರ ನಿಜವಾದ ಕರ್ತವ್ಯವನ್ನು ಕೆಲಸದ ಆಳುಗಳು ಮಾಡುವ ರೂಢಿಯಿಂದ, ಬೆಳೆಯುವ ಮಗು ಸ್ಪಂದಿಸುವ ಹೊತ್ತಿಗೆ ಬದಲಾಗುವ ಕೆಲಸದ ಆಳುಗಳ ಅವಿವೇಕತನವನ್ನು ಮೈಗೂಡಿಸುವ ಮಕ್ಕಳನ್ನು ದೂರಿ ಪ್ರಯೋಜನವೇನು? ನಿಜವಾದ ಹೊಣೆಗಾರರಾಗಬೇಕಾದ ತಂದೆ ತಾಯಿಯವರು ಶಿಕ್ಷಕರ ಮೇಲೆ ಗೂಬೆ ಕೂರಿಸುವಂತಹ ಪರಿಸ್ಥಿತಿಯೂ ನಿರ್ಮಾಣವಾಗುತ್ತದೆ. ಮಕ್ಕಳಿಗೆ ಮನೆಯೇ ಮೊದಲ ಪಾಠಶಾಲೆಯಾದರೆ, ಇಂದಿನ ದಿನಗಳಲ್ಲಿ ಮನೆಯೇ ಮಕ್ಕಳಿಗೆ ಕಾರಾಗೃಹವಾಗುತ್ತಿದೆ. ಇದೊಂದು ವಿಪರ್ಯಾಸವೆನ್ನದೆ ವಿಧಿಯಿಲ್ಲ!

ಹೆತ್ತವರು ಮಕ್ಕಳಿಗೆ ಸೂಕ್ತ ಸಮಯದಲ್ಲಿ ಮಾರ್ಗದರ್ಶನ ನೀಡದೆ ಇದ್ದರೆ, ಕೆಲಸದ ಆಳುಗಳನ್ನೇ ಮಕ್ಕಳು ಮನಸ್ಸಿಗೆ ಹಚ್ಚಿಕೊಂಡರೆ, ತಂದೆ ತಾಯಿಯರ ಮೇಲಿನ ಭಯಭಕ್ತಿ ಕೂಡಾ ಮಕ್ಕಳಿಗೆ ಇರುವುದಿಲ್ಲ. ಇದರಿಂದ ಶಾಲೆಯಲ್ಲಿ ಗುರುಗಳ ಮೇಲಿನ ಗೌರವ ಕೂಡ ಯಾವ ರೀತಿ ಪಾಲಿಸಬೇಕೆಂಬ ಅರಿವು ಇರುವುದಿಲ್ಲ. ಯಾಕೆಂದರೆ, ಮಕ್ಕಳಲ್ಲಿ ಶಿಸ್ತಿನ ಬಗ್ಗೆ ತಿಳುವಳಿಕೆ ಕಡಿಮೆ ಇರುವುದರಿಂದ

ಮೊದಲು ಎಲ್ಲಾ ಮನೆಗಳಲ್ಲಿ ತಂದೆ ತಾಯಿ, ಅಜ್ಜ ಅಜ್ಜಿಯರು ಜತೆಯಾಗಿ ಬಾಳಿದ ಕಾಲವೊಂದಿತ್ತು. ಅಂದಿನ ಕಾಲದಲ್ಲಿ ಎಲ್ಲರ ಪ್ರೀತಿಯೊಂದಿಗೆ ಬೆಳೆದ ಮಕ್ಕಳಿಗೂ ಇಂದಿನ ಮಕ್ಕಳಿಗೂ ಅಜಗಜಾಂತರ ವ್ಯತ್ಯಾಸವಿದೆ. ಇಂದಿನ ಹೈಸ್ಕೂಲು ಮಕ್ಕಳ ಹತ್ತಿರವೇ ಮಾತಾಡಲು ಭಯವಾಗುವಂತಹ ವಾತಾವರಣ ಸೃಷ್ಟಿಯಾಗಿದೆ. ಪೆನ್ನು ಪೆನ್ಸಿಲು ಹಿಡಿಯಬೇಕಾದ ಮಕ್ಕಳು ಚಾಕು, ರಿವಾಲ್ವರ್ ಹಿಡಿಯುವ ಕಾಲ ಬಂದಿದೆಯೆಂದರೆ ಯಾರನ್ನು ಹೇಗೆ ಹೊಣೆಗಾರರೆಂದು ಆಪಾದಿಸಬಹುದು?

ಉದಾಹರಣೆಗೆ ಈಚೆಗೆ ಬೆಂಗಳೂರಿನಲ್ಲಿ ನಡೆದ ಜೀವಂತ ಘಟನೆಯೇ ಸಾಕ್ಷಿ. ಹತ್ತನೇ ತರಗತಿಯ ಹುಡುಗ ಆಟೋಚಾಲಕನಿಗೆ ಚೂರಿಯಿಂದ ಇರಿದ ಘಟನೆ ಕಣ್ಣ ಮುಂದೆ ಇದೆ. ಇದಕ್ಕೆ ಮಕ್ಕಳನ್ನು ದೂರಿ ಪ್ರಯೋಜನವಿಲ್ಲ. ಇಂದಿನ ಹೆತ್ತವರ ಕಾಳಜಿ, ಪ್ರೀತಿ, ವಾತ್ಸಲ್ಯ, ಬೆಳೆಯುವ ಮಕ್ಕಳ ವಾತಾವರಣಕ್ಕೆ ಹೇಗೆ ಹೊಂದಿಕೊಂಡಿದೆ ಎಂಬುದನ್ನು ಬುದ್ಧಿವಂತ ವರ್ಗ ಮನದಟ್ಟು ಮಾಡಿಕೊಳ್ಳಬೇಕಾಗಿದೆ.

ತಂದೆತಾಯಿಯರು ಎಷ್ಟೇ ಆಧುನಿಕ ಬದುಕನ್ನು ಅವಲಂಬಿಸಿದರೂ, ಮಕ್ಕಳನ್ನು ಶಾಲೆಗೆ ಸೇರಿಸಿದ ಮೇಲೆ, ಎಲ್ಲಾ ಜವಾಬ್ದಾರಿಯನ್ನು ಶಿಕ್ಷಕರ ಮೇಲೆ ಹೊರಿಸಿ ಬಿಡುವುದು ನಿಜಕ್ಕೂ ಜಾಣತನವಲ್ಲ, ಬುದ್ಧಿವಂತಿಕೆಯೂ ಅಲ್ಲ. ಹಾಗಾದಾಗ ಮಕ್ಕಳು ತಪ್ಪುದಾರಿಗೆ ಇಳಿದಾಗಲೂ ಶಿಕ್ಷಕರನ್ನು ಗುರುತರ ಆರೋಪದ ಹಿನ್ನೆಲೆಯಲ್ಲಿ ಟೀಕಿಸುವುದು ಎಷ್ಟು ಸರಿಯೆನ್ನಿಸುತ್ತದೆ? ಅದುದರಿಂದ ಎಷ್ಟೇ ಕಷ್ಟದ ಪರಿಸ್ಥಿತಿ ಇದ್ದರೂ ತಂದೆತಾಯಿಯರು ಅವರವರ ಮಕ್ಕಳನ್ನು ಅವರವರೇ ಸರಿದಾರಿಯಲ್ಲಿ ಮುನ್ನಡೆಸುವ ಮೊದಲ ಪಾಠವನ್ನು, ಶಿಕ್ಷಣ ಕ್ರಮವನ್ನು ಕೈಗೊಂಡರೆ ಕರ್ತವ್ಯವನ್ನು ಪರಿಪಾಲಿಸಿದಂತಾಗುತ್ತದೆ. ಇದರಿಂದ ಇಂದಿನ ಮಕ್ಕಳ ಮನೋವೇದನೆಯನ್ನೂ ಅರಿತಂತಾಗುತ್ತದೆ. ಇಲ್ಲದಿದ್ದರೆ, ಚಾಕು ಚೂರಿ ಸಂಸ್ಕೃತಿಯಲ್ಲೇ ಮಕ್ಕಳು ಬೆಳೆಯುತ್ತಾರೆ!?

–ಸಾಭಾರ–ಪ್ರಜಾವಾಣಿ

***

ಬೆಳೆಯುತ್ತಿರುವ ಮಕ್ಕಳಿಗೆ ಕಲ್ಯಾಣಕಾರಿ ಸೂತ್ರಗಳು

ಇಂದಿನ ಮಕ್ಕಳೆ ನಾಳಿನ ಪ್ರಜೆಗಳು ಎಂಬೀ ಮಾತು ಸರ್ವೆಸಾಮಾನ್ಯವಾಗಿ ಎಲ್ಲ ವಿಚಾರವಂತರ ಬಾಯಿಂದ ಬರುತ್ತದೆ. ಇದು ಬಹಳ ಮುಖ್ಯವಾದ ಮಾತು. ಯಾವುದೇ ಒಂದು ರಾಷ್ಟ್ರ ಪ್ರಜಾಬಾಹುಳ್ಯದಿಂದ ಕೂಡಿರುತ್ತದೆ. ದೇಶದ ಎಲ್ಲ ಭೌಗೋಳಿಕ ಸಂಪತ್ತಿಗಿಂತ ಆ ದೇಶದ ಪ್ರಜೆಗಳಲ್ಲಿಯ ಗುಣಧರ್ಮಗಳೆ ಬಹು ಬೆಲೆಯುಳ್ಳದ್ದಾಗಿರುತ್ತವೆ. ಯಾವ ದೇಶದ ಪ್ರಜೆಗಳು ಸದ್ಗುಣಿಗಳೂ, ಪ್ರಮಾಣಿಕರೂ, ಸಜ್ಜನರೂ, ಧೀಮಂತರೂ ಆಗಿರುತ್ತಾರೊ ಆ ದೇಶ ಸ್ವರ್ಗಸಮಾನವಾಗುತ್ತದೆ. ಆದ್ದರಿಂದ ನಾಳಿನ ಪ್ರಜೆಗಳಾದ ಇಂದಿನ ಮಕ್ಕಳಲ್ಲಿ ಉದ್ದೀಪನಗೊಳಿಸಬಹುದಾದ ಆದರ್ಶಗಳನ್ನು, ಗುಣ ವಿಶೇಷಣಗಳನ್ನು ನಾವು ಹುಡುಕಿಕೊಂಡು ಬೇರೆಲ್ಲಿಗೂ ಹೋಗಬೇಕಾಗಿಲ್ಲ ನಮ್ಮ ದೇಶದ ಪುರಾಣೇತಿಹಾಸಗಳಲ್ಲಿ, ವೇದೋಪನಿಷತ್ತುಗಳಲ್ಲಿ ಮಹಾನ್ ನಾಯಕರ ಜೀವನ ಚರಿತ್ರೆಗಳಲ್ಲಿ ಹೇರಳವಾಗಿ ದೊರೆಯುತ್ತದೆ. ಮೌಲಿಕವಾದ ಅಂಥ ವಿಷಯಗಳನ್ನು ಸಂಗ್ರಹಿಸಿ ನಮ್ಮ ಮಕ್ಕಳಿಗೆ ತಿಳಿಸುವ ಕೆಲಸವನ್ನು ಮಕ್ಕಳ ಭವಿಷ್ಯದಲ್ಲಿ ಆಸಕ್ತಿಯಿರುವವರೆಲ್ಲರೂ ಮಾಡಬೇಕಾಗಿದೆ. ರಾಮಾಯಣ ಮತ್ತು ಮಹಾಭಾರತ ನೀತಿ ಮತ್ತು ಸಾಮಾಜಿಕ ಸಿದ್ಧಾಂತಗಳ ಗಣಿಯಾಗಿವೆ. ರಾಮಾಯಣದಲ್ಲಿ ವಾಲ್ಮೀಕಿಯು ಶ್ರೀ ರಾಮಚಂದ್ರನ ಮೂಲಕ ನಾಳಿನ ಪ್ರಜೆಗಳಾಗುವ ಮಕ್ಕಳಿಗೆ ಆದರ್ಶದ ಮಾರ್ಗವನ್ನು ತೋರಿಸಿದ್ದಾನೆ. ಆ ಮಾರ್ಗದಲ್ಲಿ ನಮಗೆ ತಿಳಿದು ಬರುವ ಈ ಕೆಳಕಾಣಿಸಿದ ಆದರ್ಶಗುಣಗಳನ್ನು ನಮ್ಮ ದೇಶದ ಎಲ್ಲ ಮಕ್ಕಳಿಗೆ ತೋರಿಸಕೊಟ್ಟಲ್ಲಿ ಎಂಥ ಸಾತ್ವಿಕ ಗುಣದ ಸ್ವಭಾವದ ಸಮಾಜವನ್ನು ರಚಿಸಬಹುದು!

೧. ಆತನು ಯಾವಾಗಲೂ ಶಾಂತಸ್ವಭಾವದವನು, ಸಂಭಾಷಣೆಯನ್ನು ತಾನೇ ಮೊದಲು ಮಾಡುತ್ತಾನೆ, ಮತ್ತು ಮೃದುವಾಗಿ ಮಾತನಾಡುತ್ತಾನೆ.

೨. ಬಿರುಸಾಗಿ ಮಾತನಾಡಿದವರಿಗೆ ಮರು ಬಿರುಸನ್ನು ನುಡಿಯುವುದಿಲ್ಲ.

೩. ಎಂದೋ ತನಗೆ ಮಾಡಿದ್ದ ಯಾವುದೋ ಒಂದು ಉಪಕಾರವನ್ನು ಯಾವಾಗಲೂ ನೆನಸಿಕೊಂಡು ಸಂತೋಷಪಡುತ್ತಾನೆ.

೪. ನೂರು ಅಪಕಾರಗಳು ತನಗಾಗಿದ್ದರೂ ಅದನ್ನು ನೆನೆಯುವುದೆ ಇಲ್ಲ; ಅದಕ್ಕೆ ಕಾರಣ ತನ್ನಲ್ಲಿ ತನಗಿರುವ ನಂಬಿಕೆ(ಧೈರ್ಯ)

೫. ಆತನು ದೀನರಲ್ಲಿ ಸಹಾನುಭೂತಿಯುಳ್ಳವನು; ಧರ್ಮ ತಿಳಿದವನು; ತನ್ನ ಮೇಲೆ ತನಗೇ ಹಿಡಿತವಿರಿಸಿಕೊಂಡವನು; ಶುಚಿವಂತನು.

೬. ಕುಲಕ್ಕೆ ತಕ್ಕ ಬುದ್ಧಿ ಸಂಪತ್ತುಳ್ಳವನು; ತನ್ನ ಕ್ಷತ್ರಿಯ ಧರ್ಮವನ್ನು ಆತನು ಅದು ದೊಡ್ಡದೆಂದು ಗೌರವಿಸುತ್ತಾನೆ.

೭. ಶುಭಗುಣಗಳಿಗೆ ಆಕರಪ್ರಾಯನು, ಸಾಧು, ಧೀರನು, ಸತ್ಯಭಾಷಿ, ಸರಳನು.

೮. ಧರ್ಮಾರ್ಥಗಳನ್ನು ಬಲ್ಲ ಬ್ರಾಹ್ಮಣರಿಂದಲೂ ವೃದ್ಧರಿಂದಲೂ ನಡವಳಿಕೆ ಕಲಿತವನು.[ಇಲ್ಲಿ ಬ್ರಾಹ್ಮಣರೆಂದರೆ ವರ್ಣಾಶ್ರಮಾರ್ಥದ ಬ್ರಾಹ್ಮಣರಲ್ಲ. ಸಜ್ಜನರು, ವಿಚಾರವಂತರೂ ಆದ ವ್ಯಕ್ತಿಗಳೆಂದರ್ಥ.]

೯. ಧರ್ಮ ಅರ್ಥ ಕಾಮಗಳೆಂಬ ಪುರುಷಾರ್ಥಗಳ ತತ್ವವನ್ನರಿತವನು; ಸ್ಮೃತಿಶಕ್ತಿ ಪ್ರತಿಭಾಶಕ್ತಿ ಸಂಪನ್ನನು.

೧೦. ಲೋಕ ನೀತಿಗಳಲ್ಲಿಯೂ ಸಮಾಜದ ಸಂಕೇತ ಸಂಪ್ರದಾಯಗಳಲ್ಲಿಯೂ ಮರ್ಮವರಿತು ನಡೆಯುವವನು.

೧೧. ನಿಶ್ಚಲವಾದ ಭಗವದ್ಭಕ್ತಿಯುಳ್ಳವನು; ಸ್ಥಿರವಾದ ವಿವೇಕ ವಿಜ್ಞಾನಗಳುಳ್ಳವನು; ಕೆಟ್ಟದ್ದನ್ನೊಪ್ಪದವನು; ಕೆಟ್ಟದನ್ನು ನುಡಿಯದವನು.

೧೨. ಸೋಮಾರಿತನವಿಲ್ಲದವನು' ಮೈಮರೆಯದವನು; ತನ್ನಲಿರುವ ದೋಷಗಳನ್ನೂ ಇತರರ ದೋಷಗಳನ್ನೂ ಕಂಡು ಕೊಂಡಿರುವವನು.

೧೩. ಶಾಸ್ತ್ರನಿಪುಣನು; ಕೃತ್ಯಾಕೃತ್ಯವಿವೇಕಿ; ಇತರರ ಅಂತರಂಗವನ್ನು ಊಹಿಸಿ ಕಂಡವನು.

೧೪. ದಂಡಿಸುವುದರಲ್ಲಿಯೂ ಅನುಗ್ರಹಿಸುವದರಲ್ಲಿಯೂ ನ್ಯಾಯವನ್ನು ನಡೆಸಲು ಶಕ್ತನು.

೧೫. ಜನರನ್ನು ಸಂಪಾದಿಸಿಕೊಳ್ಳುವುದರಲ್ಲಿಯೂ ಹದ್ದಿನಲ್ಲಿರಿಸುವುದರಲ್ಲಿಯೂ ತುಳಿದುಹಾಕುವುದರಲ್ಲಿಯೂ ಅದಕ್ಕೆ ತಕ್ಕ ಸ್ಥಾನ ಕಾಲ ಸಂದರ್ಭಗಳನ್ನರಿತವನು

೧೬. ಆದಾಯದ ಕೆಲಸಗಳಲ್ಲಿ ಉಪಾಯಶಾಲಿ; ವ್ಯಯ ವಿಚಾರವನ್ನು ನೋಡಿಕೋಳ್ಳುವುದರಲ್ಲಿ ಜಾಗರೂಕನು

೧೭. ಶಾಸ್ತ್ರಜ್ಞ ಸಭೆಯಲ್ಲಿಯೂ ಪಂಡಿತಪಾಮರು ಕಲೆತು ಕೊಂಡಿರುವಲ್ಲಿಯೂ ಶ್ರೇಷ್ಠತೆ ಪಡೆದಿರುವವನು

೧೮. ಅರ್ಥ(ಧನ)ವನ್ನೂ, ಧರ್ಮವನ್ನೂ ಶೇಖರಮಾಡಿ ಸುಖಪಡುವುದರಲ್ಲಿ ಅಲಸ್ಯವಿಲ್ಲದೆ, ದಕ್ಷನಾಗಿರುವವನು

೧೯. ಹೊಟ್ಟೆಕಿಚ್ಚಿಲ್ಲದವನು; ಕೋಪವನ್ನು ಗೆದ್ದವನು; ಗರ್ವವಿಲ್ಲದವನು; ಕರುಬದವನು

೨೦. ಯಾವ ಪ್ರಾಣಿಯನ್ನೂ ಅವಮಾನಪಡಿಸದವನು; ಧರ್ಮತತ್ವವನ್ನೂ ತನ್ನ ಪ್ರತಿಜ್ಞೆಯನ್ನೂ ಮರೆತು ಆಯಾ ಕ್ಷಣಕ್ಕೆ ಸರಿಯೆನಿಸಿದಂತೆ ನಡೆಯುವವನಲ್ಲ.

[ಅಯೋಧ್ಯಾಕಾಂಡ ಯೌವ್ವರಾಜ್ಯ ಪ್ರಸಂಗ ಶ್ಲೋಕ ೧೦–೩೦]
ಅನು–ಡಿ.ವಿ.ಜಿ.

* * *

ಜನಪದ ನಿಲಯದ ಅಂತರಂಗದಲ್ಲಿ..........೨೪



ರಾಜ್ಯಮೋಹವು ಎನಗೆ ಇಲ್ಲವು ಸ್ವರ್ಗದಾಸೆಯೆ ಇಲ್ಲವು।
ಮತ್ತೆ ಮೋಕ್ಷವ ಪಡೆಯಬೇಕೆಂಬಿಚ್ಛೆಯೇ ಎನಗಿಲ್ಲವು॥
ನಾನು ಬೇಡುವುದೊಂದೇ ದೇವಾ ದುಃಖಿಗಳ ಕಂಬನಿಗಳು।
ಆರ್ತನಾದಗಳೆಲ್ಲವಳಿಯಲಿ ಇದುವೆ ಕೋರಿಕೆ ನನ್ನದು.

–ಈಶಾವಾಸ್ಯೋಪನಿಷತ್

ನನ್ನ ಮದುವೆಯ ದಿನಾಂಕ ೧೯೬೦ ಅಕ್ಟೋಬರ್ ೨೪. ಮದುವೆಯ ಸ್ಥಳ ಶ್ರೀರಂಗಪಟ್ಟಣದ ಕಾವೇರಿ ನದಿಯ ಪಕ್ಕದಲ್ಲಿದ್ದ ಕೃಷ್ಣಮೂರ್ತಿ ಬಂಗಲೆ. ಈಗಲೂ ಈ ಬಂಗಲೆ ಇದೆ. ಆದರೆ ವಿವಾಹಗಳಿಗೆ ಅಲ್ಲಿ ಅವಕಾಶಗಳಿದ್ದಂತಿಲ್ಲ ಈ ಕೃಷ್ಣಮೂರ್ತಿ ಬಂಗಲೆ ಎಂಬುದು ಐತಿಕಾಸಿಕ ತಾಣ. ಶ್ರೀರಂಗಪಟ್ಟಣದಲ್ಲಿ ಟಿಪ್ಪು ಸುಲ್ತಾನ್ ಆಳುತ್ತಿದ್ದಾಗ ಈಸ್ಟ್ಇಂಡಿಯಾ ಕಂಪನಿಯ ಅಧಿಕಾರಿಯೊಬ್ಬ ಈ ಮನೆಯನ್ನು ತನ್ನ ವಾಸಕ್ಕಾಗಿ ಕಟ್ಟಿಸಿಕೊಂಡಿದ್ದನಂತೆ. ಈ ಮನೆ ಇಂಗ್ಲಿಷ್‌ರ ಜೀವನಶೈಲಿ ಮತ್ತು ಅವರ ರೀವಿಗನುಸಾರವಾಗಿ ಕಟ್ಟಿದಂತದಾಗಿತ್ತು ಅಂದರೆ ವಿಶಾಲವೂ, ಭವ್ಯವೂ ಆಗಿದ್ದಿತು. ಮನೆಯ ರಚನೆಗೆ ಉಪಯೋಗಿಸಲಾಗಿದ್ದ ಮರಗಳೆಲ್ಲ ಅಚ್ಚ ಸಾಗುವಾನಿ ಮರಗಳಾಗಿದ್ದವು, ದೊಡ್ಡಕಿಟಕಿಗಳು ಮತ್ತು ಬಹು ಎತ್ತರವಾದ ಬಾಗಿಲುಗಳು ಇದ್ದವು. ಮನೆಯ ಸುತ್ತ ವಿಶಾಲವಾದ ಸ್ಥಳ, ಅಲ್ಲಲ್ಲಿ ತೆಂಗಿನಮರಗಳು, ಮುಖ್ಯರಸ್ತೆಯಿಂದ ಸುಮಾರು ಒಂದು ಕಿ.ಮೀ.ಒಳಗೆ ನದಿಯ ಪಕ್ಕದಲ್ಲಿದಂಥ ಮನೆ. ಈ ಬಂಗಲೆಯಿಂದ ಕೆಲವೆ ಹೆಜ್ಜೆಗಳ ದೂರದಲ್ಲಿ ನದಿ ನೀರಿನ ಸ್ಪರ್ಶಮಾಡಿಕೊಳ್ಳುವುದಕ್ಕೆ ಅನುಕೂಲವಾಗುವಂತೆ ಸೋಪಾನಗಳು. ಅಕ್ಕಪಕ್ಕದಲ್ಲಿ ಯಾವ ಜನಸಂದಣಿಯೂ ಇಲ್ಲ. ಇಂಥ ಸುಂದರವಾದ ಶಾಂತವಾದ ಸ್ಥಳದಲ್ಲಿ ನನ್ನ ಮದುವೆ ಆಗುತ್ತಿದುದು ನನಗೆ ಮತ್ತು ನನ್ನ ಹಿರಿಯರಿಗೆ ಹಾಗೂ ಬಂಧುಗಳಿಗೆ ಹಾಗೂ ಸ್ನೇಹಿತರಿಗೆ ಸಂತೋಷವನ್ನುಂಟು ಮಾಡಿತ್ತು.

ಮದುವೆಯ ಹಿಂದಿನ ದಿನವೆ ನಾನು ಮತ್ತು ನನ್ನ ತಂದೆ–ತಾಯಿಗಳು ಹಾಗೂ ಅಣ್ಣ ಮತ್ತು ಅತ್ತಿಗೆ ಇನ್ನೂ ಕೆಲ ಬಂಧುಗಳೊಂದಿಗೆ ರೈಲಿನಲ್ಲಿ ಮೈಸೂರಿಗೆ ಬಂದು ಇಳಿದೆನು. ಆಗ ಸಂಜೆಯ ಸಮಯ. ರಾತ್ರಿ ಮೈಸೂರಿನಲ್ಲಿ ತಂಗುವುದಕ್ಕಾಗಿ ಬಿ.ಆರ್.ಪ್ರಾಣೇಶ್‌ರಾವ್‌ರವರು ರಮಾವಿಲಾಸ ರಸ್ತೆಯಲ್ಲಿದ್ದ ಗಾಂಧೀ ಗ್ರಂಥಮಾಲೆಯ ಕಛೇರಿಯ ಹೊರ ಆವರಣದಲ್ಲಿ ನನಗೆ ಸ್ಥಳ ಕಾದಿರಿಸಿದ್ದರು. ಪ್ರಾಣೇಶ್‌ರಾವ್ ಈ ಮೊದಲೆ ನಾನು ತಿಳಿಸಿರುವಂತೆ ಮೊದಲಿನಿಂದಲೂ ನನ್ನ ಸಾರ್ವಜನಿಕ ಕೆಲಸಕ್ಕೆ ಬೆಂಬಲಿಗರಾಗಿ ನಿಂತವರು. ನನ್ನ ಮದುವೆಯ ಸಂದರ್ಭದಲ್ಲೂ ಸಹ ಅವರು ನನ್ನ ಓರ್ವ ಹಿರಿಯಣ್ಣನಂತೆ ಉತ್ಸಾಹದಿಂದ ನೆರವಾದರು. ೨೩ ರ ರಾತ್ರಿಯನ್ನು ಗಾಂಧೀ ಗ್ರಂಥಮಾಲೆಯಲ್ಲಿ ಕಳೆದು ೨೪ರ ಬೆಳಿಗ್ಗೆ ಶ್ರೀರಂಗಪಟ್ಟಣದ ಮದುವೆಯ ಸ್ಥಳವಾದ ಕೃಷ್ಣಮೂರ್ತಿ ಬಂಗಲೆಗೆ ಹೋದೆವು. ಅಷ್ಟರಲ್ಲಿ ನನ್ನ ಇನ್ನೂ ಕೆಲವು ಸಂಬಂಧಿಗಳು ಆಗಲೇ ಅಲ್ಲಿಗೆ ಬಂದಿದ್ದರು. ನನ್ನ ಮದುವೆ ಅತ್ಯಂತ ಸರಳವಾಗಿ ನಡೆಯಿತು. ಮೇಲುಕೋಟೆಯಿಂದಲೂ ಹತ್ತಾರು ಅಭಿಮಾನಿಗಳು ಬಂದಿದ್ದರು. ಅವರಲ್ಲಿ ಮುಖ್ಯರಾದವರು ಭಾ.ವೆಂ.ರಾಘವಾಚಾರ್ಯರು, ಪು.ತಿ.ಕೃಷ್ಣಯ್ಯಂಗಾರ್‌ರು, ರಂಗಸ್ವಾಮಿಶೆಟ್ಟರು, ಜಗ್ಗುನಾರಾಯಣ್, ಬಿ.ವಿ.ರಾಮಾನುಜ್, ಶ್ರೀನಾಥ, ಕೃಷ್ಣರಾಜ

ಪೇಟೆಯಿಂದ ಹಫೀಸ್, ಅಯಾಜ್, ಕಸ್ತೂರಾಚಾರ್, ಸಿ.ಎನ್.ಜಯಲಕ್ಷ್ಮಿದೇವಿ ಮುಂತಾದವರು ಆಗಮಿಸಿದ್ದರು. ನಾನು ಬಿಹಾರಿನಲ್ಲಿದ್ದಾಗ ನನ್ನ ಆಪ್ತ ಮಿತ್ರರಾಗಿದ್ದ ತ್ರಿಪುರಾರಿ, ಶರಣ್‌ಸಿಂಗ್ ಸಹ ಬಂದಿದ್ದರು. ಮೈಸೂರಿನಿಂದ ಖಾದ್ರಿಶಾಮಣ್ಣ, ಬಿ.ಆರ್.ಪ್ರಾಣೇಶ್‌ರಾವ್ ಬಂದಿದ್ದರು. ಮದುಮಗನೆಂದು ನನಗೆ ಹೆಣ್ಣಿನ ಕಡೆಯವರು ಮೂರು ಜೊತೆ ಖಾದಿ ಪಂಚೆ ಮತ್ತು ಜುಬ್ಬಗಳನ್ನು ಕೊಟ್ಟರು. ಮದುವೆಯ ದಿನ ಆರತಕ್ಷತೆ ಆದ ಮೇಲೆ ಆಹ್ವಾನಿತರಿಂದ ಉಡುಗೊರೆಯಾಗಿ ಬಂದದ್ದು ಗಾಂಧೀ ಗ್ರಂಥ ಮಾಲೆಯ ಗಾಂಧೀ ಸಾಹಿತ್ಯದ ಸಂಪುಟಗಳು. ಕೆಲವರು ಹತ್ತತ್ತು ರೂಗಳ ಕಾಣಿಕೆಯನ್ನು ಕೊಟ್ಟಿರಬಹುದು. ಮಧ್ಯಾಹ್ನದ ಊಟವಾದ ನಂತರ ಮದುವೆಯ ಕಾರ್ಯಕ್ರಮಗಳೆಲ್ಲ ಮುಗಿದವು. ಮದುವೆಯ ವಿಧಿ-ವಿಧಾನಗಳೆಲ್ಲ ನಡೆದದ್ದು ಕೇವಲ ಐದುಗಂಟೆಗಳ ಕಾಲ. ಊಟವು ಸಾಮಾನ್ಯವಾಗಿದ್ದರೂ ಸಹ ಎಲ್ಲವೂ ಬಹು ರುಚಿಕರವಾಗಿತ್ತು. ಊಟ ಮಾಡಿದವರೆಲ್ಲರೂ ಬಹು ಸಂತೋಷಪಟ್ಟರು. ಬೆಳಿಗ್ಗೆ ಊಟಕ್ಕಿಂತ ಮೊದಲು ಕೊಡಲಾಗಿದ್ದ ಉಪಹಾರವು ಸಹ ರುಚಿಕರವಾಗಿತ್ತು. ಒಳ್ಳೆಯ ತುಪ್ಪದಲ್ಲಿ ಮಾಡಲಾಗಿದ್ದ ಕೇಸರಿಬಾತ್ ಮತ್ತು ಇಡ್ಲಿ ಎಲ್ಲರಿಗೂ ಇಷ್ಟವಾದವು. ಊಟವಾದ ನಂತರ ನಮ್ಮ ಸಂಬಂಧಿಗಳನೇಕರು ಶ್ರೀರಂಗನಾಥ ದೇವಾಲಯಕ್ಕೆ ಹೋಗಿ ದೇವರ ದರ್ಶನ ಮಾಡಿಕೊಂಡು ಬಂದರು. ಸಂಜೆಯ ಹೊತ್ತು ಆರತಕ್ಷತೆಯ ಕಾರ್ಯಕ್ರಮ ಇದು ಅತ್ಯಂತ ಸರಳವಾಗಿದ್ದಿತು. ನವ ವಧು-ವರರನ್ನು ಕುರ್ಚಿಯ ಮೇಲೆ ಕೂಡಿಸಿ ಮದುವೆಗೆ ಬಂದಿದ್ದ ವಾದ್ಯವೃಂದದವರಿಂದಲೆ ಮತ್ತೆ ವಿಶೇಷವಾಗಿ ವಾದ್ಯಗೋಷ್ಠಿಯನ್ನು ಏರ್ಪಡಿಸಲಾಗಿತ್ತು. ನಂತರ ಮದುವೆಗೆ ಆಗಮಿಸಿದ್ದ ಕೃಷ್ಣರಾಜಪೇಟೆ ಮಹಿಳಾ ಸಮಾಜದ ಶಿಶುವಿಹಾರದ ಗಿರಿಜಾರವರ ಶಿಷ್ಯೆಯರಿಂದ ಹಾವಭಾವಪೂರ್ಣವಾದ ಶಿಶುಗೀತೆಗಳ ಪ್ರದರ್ಶನ. ಮಕ್ಕಳು ತಮ್ಮ ಅಭಿನಯ ಗೀತೆಗಳಿಂದ ಎಲ್ಲರನ್ನೂ ಸಂತೋಷಪಡಿಸಿದರು. ಮದುವೆಯ ಮಾರನೆ ದಿನ ಅಡಿಗೆಯವರು ಇಲ್ಲದೆ ಇದ್ದುದರಿಂದ ಮದುವೆಗೆ ಬಂದಿದ್ದ ನಮ್ಮ ಮನೆಯವರಿಗೂ ಮತ್ತು ಸಂಬಂಧಿಗಳಿಗೂ ಉಪಹಾರಕ್ಕಾಗಿ ಇಡ್ಲಿಯನ್ನು ತಯಾರಿಸಲಾಗಿತ್ತು. ಇಡ್ಲಿ ತಯಾರಿಸಲು ಅಗತ್ಯವಾಗಿದ್ದ ಹಿಟ್ಟನ್ನು ರುಬ್ಬುವ ಕೆಲಸವನ್ನು ನವ ವಧುವಾಗಿದ್ದ ಗಿರಿಜಾರವರು ಮಾಡಿದರು. ಇದು ನನ್ನ ತಂದೆ ತಾಯಿಗಳಿಗೆ ಸ್ವಲ್ಪ ಬೇಸರವನ್ನುಂಟುಮಾಡಿತು ಆದರೆ ಗಿರಿಜಾ ತನ್ನ ಮನೆಯವರ ಗೌರವವನ್ನು ಕಾಪಾಡುವುದಕ್ಕೋಸ್ಕರ ಎಂಥ ಶ್ರಮಕ್ಕೂ ತಯಾರಾಗಿದ್ದಳು.

ಈ ರೀತಿ ಶಿಶುಗೀತೆಗಳನ್ನು ಹಾಡಿ ಕುಣಿದ ಇಬ್ಬರು ಮಕ್ಕಳು ಜ್ಯೋತಿ ಮತ್ತು ಮಂಗಳ ಎಂಬುವವರು. ಮಂಗಳ ಈಗ ಅಮೆರಿಕಾದಲ್ಲಿ ತನ್ನ ಗಂಡನೊಂದಿಗಿದ್ದಾಳೆ, ಜ್ಯೋತಿಯು ವೈದ್ಯಳಾಗಿ ಮೈಸೂರಿನಲ್ಲಿದ್ದಾಳೆ. ಇಂದಿಗೂ ಸಹ ಅವರು ನಮ್ಮಲ್ಲಿಗೆ ಬಂದಾಗ ನನ್ನ ಮದುವೆಯಲ್ಲಿ ಹಾಡಿಕುಣಿದ ಸಂಗತಿಯನ್ನು ಜ್ಞಾಪಿಸಿಕೊಂಡು ತುಂಬಾ ಖುಷಿಪಡುತ್ತಾರೆ. ಮಂಗಳ ಆಗಾಗ್ಗೆ ನಮ್ಮ ಟ್ರಸ್ಟಿಗೆ ಧನಸಹಾಯ ಮಾಡುವುದುಂಟು ಹೀಗೆ ಅಕ್ಟೋಬರ್ ೨೪ ರಂದು ವಿಶ್ವಸಂಸ್ಥೆಯ ಸಂಸ್ಥಾಪನಾದಿನದಂದು ನನ್ನ ಮದುವೆ ಸರಳವಾಗಿ ನಡೆದು ನಾನು ಮತ್ತು ಗಿರಿಜಾ ದಂಪತಿಗಳಾಗಿ ಹೊಸಜೀವನವನ್ನು ಪ್ರಾರಂಭಿಸಿದೆವು. *(ಮುಂದುವರಿಯುವುದು....)*

ಜನಪದ ಸೇವಾ ಟ್ರಸ್ಟಿನ ಅಂಗಳ



ಈ ವರ್ಷದ ಜನವರಿ ತಿಂಗಳಿನಿಂದ ಪ್ರಾರಂಭವಾಗಿ ಸಂಪೂರ್ಣ ಕ್ರಾಂತಿ ವಿದ್ಯಾಲಯದ ಶಿಬಿರಗಳು ಒಂದಾದ ನಂತರ ಒಂದು ನಡೆದುಕೊಂಡು ಬಂದವು ಇದುವರೆಗೆ ಏಳು ಶಿಬಿರಗಳು ಮುಗಿದಿವೆ. ಈ ಸರಣಿಯ ಏಳನೆ ಶಿಬಿರದಲ್ಲಿ ಪಾಂಡಿಚೇರಿ ಕ್ಷೇತ್ರದ ವಿವಿಧ ಕಾಲೇಜುಗಳಿಂದ ೨೫ ಶಿಬಿರಾರ್ಥಿಗಳು ಭಾಗವಹಿಸಿದ್ದರು ಇವರಲ್ಲಿ ಕೆಲವರು ಅಧ್ಯಾಪಕರು ಸಹ ಇದ್ದರು. ಮಂಡ್ಯ ಜಿಲ್ಲೆಯ ಕೌಡ್ಲೆ ಗ್ರಾಮದಲ್ಲಿ ಜಯಪ್ರಕಾಶ್ ನಾರಾಯಣರ ಹೆಸರಿನಲ್ಲಿ ಒಂದು ಪ್ರೌಢಶಾಲೆ ನಡೆಯುತ್ತಿದೆ. ಈ ಶಾಲೆಯಲ್ಲಿ ಅಕ್ಟೋಬರ್ ೧೧ ರಂದು ಜಯಪ್ರಕಾಶರ ಜನ್ಮದಿನೋತ್ಸವವನ್ನು ಆಚರಿಸಲಾಯಿತು. ಆ ಸಭೆಯಲ್ಲಿ ಟ್ರಸ್ಟಿನ ಕಾರ್ಯದರ್ಶಿಯವರು ಭಾಗವಹಿಸಿ ಅಲ್ಲಿ ಸಂಪೂರ್ಣ ಕ್ರಾಂತಿಯ ವಿಚಾರವನ್ನು ತಿಳಿಸಿದರು. ಪ್ರತಿ ಹದಿನೈದು ದಿನಗಳಿಗೊಮ್ಮೆ ನಡೆಯುವ ಹೋಮಿಯೋಪತಿ ಚಿಕಿತ್ಸಾ ಕೇಂದ್ರವು ಸಹ ನಡೆಯಿತು. ಈಗಾಗಲೆ ಔಷಧಿಯನ್ನು ತೆಗೆದುಕೊಳ್ಳುತ್ತಿರುವ ರೋಗಿಗಳು ಬಂದು ತಮ್ಮ ಚಿಕಿತ್ಸೆಯ ಬಗ್ಗೆ ಮುಂದಿನ ಮಾರ್ಗದರ್ಶನ ಪಡೆದರು. ಕರುಣಾಗೃಹದ ಹಳೆಯ ವಿದ್ಯಾರ್ಥಿ ದೊಡ್ಡಲಿಂಗಯ್ಯ ಈಗ ಸರ್ಕಾರಿ ನೌಕರರಾಗಿದ್ದು ಸಾರ್ವಜನಿಕ ಕಾರ್ಯದಲ್ಲಿ ಆಸಕ್ತಿಯಿಟ್ಟುಕೊಂಡಿದ್ದಾರೆ. ಅವರು ತಮ್ಮ ಇನ್ನೊಬ್ಬ ಅಂಗವಿಕಲ ಸ್ನೇಹಿತರೊಂದಿಗೆ ಟ್ರಸ್ಟಿಗೆ ಭೇಟಿಕೊಟ್ಟರು. ಅಲ್ಲದೆ ತಾವು ಬರುವಾಗ ಉತ್ತಮ ಗುಣಮಟ್ಟದ ವ್ಹೀಲ್‌ಛೇರ್‌ವೊಂದನ್ನು ತಂದಿದ್ದರು. ಅದನ್ನು ಟ್ರಸ್ಟ್‌ನಲ್ಲಿರುವ ಮಕ್ಕಳ ಉಪಯೋಗಕ್ಕೆ ಕೊಟ್ಟರು. ಪ್ರತಿ ತಿಂಗಳಂತೆ ಈ ತಿಂಗಳಲ್ಲಿಯೂ ಸಹ ಸರ್ವೋದಯ ಪಾತ್ರೆಯ ಧಾನ್ಯವನ್ನು ಫಲಾನುಭವಿಗಳಿಗೆ ಹಂಚಲಾಯಿತು. ಟ್ರಸ್ಟಿನ ಹೊಸ ಜೀವನ ದಾರಿ ಕೇಂದ್ರದಲ್ಲಿ ಖಾದಿ ಬಟ್ಟೆಯ ಸಿದ್ಧ ಉಡುಪುಗಳ ತಯಾರಿಕಾ ಘಟಕವನ್ನು ಕಳೆದ ಒಂದು ವರ್ಷದಿಂದ ನಡೆಸಲಾಗುತ್ತಿದೆ. ಇದರಲ್ಲಿ ೧೫ ಗ್ರಾಮೀಣ ಯುವತಿಯರು ಉದ್ಯೋಗ ಮಾಡುತ್ತಿದ್ದಾರೆ. ಖಾದಿ ಜುಬ್ಬಗಳನ್ನು ಹೊಲಿಯುವುದರ ಜೊತೆಗೆ ಕೌದಿಗಳನ್ನು ಸಹ ತಯಾರಿಸುತ್ತಾರೆ. ಜುಬ್ಬ ಮತ್ತು ಕೌದಿ ಹಾಗೂ ಹೆಗಲುಚೀಲಗಳು ಜನಪ್ರಿಯವಾಗಿರುವ ಟ್ರಸ್ಟಿನ ಖಾದಿ ಉತ್ಪಾದನೆಗಳಾಗಿವೆ. ಸಂತೋಷ್‌ಕೌಲಗಿಯವರು ಅನುವಾದಿಸಿರುವ ಪುಕೊವೊಕರ 'ಒಂದು ಹುಲ್ಲಿನ ಕ್ರಾಂತಿ' ಇಂದಿಗೂ ಜನಪ್ರಿಯವಾಗಿದೆ. ಇತ್ತೀಚೆಗೆ ನವಕರ್ನಾಟಕ ಪ್ರಕಾಶನದವರು ಒಮ್ಮೆಲೆ ೧೦೦ ಪುಸ್ತಕಗಳನ್ನು ತರಿಸಿಕೊಂಡರು. ಈ ಪುಸ್ತಕದ ಕಾರಣದಿಂದಾಗಿ ಕರ್ನಾಟಕದಲ್ಲಿ ಸಾವಯವ ಕೃಷಿಯ ಪ್ರಚಾರವಾಯಿತು. ಟ್ರಸ್ಟಿಗೆ ಅನೇಕ ಅಭಿಮಾನಿ ಸ್ನೇಹಿತರು ಭೇಟಿಕೊಟ್ಟು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಜನಪದ ಮುಕ್ತ ವಿದ್ಯಾಲಯದ ಮಕ್ಕಳೆಲ್ಲರೂ ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸುತ್ತಿದ್ದಾರೆ.

[ಇದು ೨೦೦೫ ಅಕ್ಟೋಬರ್ ಮಾಹೆಗೆ ಸಂಬಂಧಿಸಿದ ಮಾಹಿತಿ]

ಸಂತಾಪ

೨೦೦೫ ಅಕ್ಟೋಬರ್ ೮ ರಂದು ಸಂಭವಿಸಿದ ಭೂಕಂಪದಲ್ಲಿ ಮಡಿದ ಬಂಧುಗಳಿಗಾಗಿ ಜನಪದ ವಿಚಾರ ತನ್ನ ಅಳಲನ್ನು ವ್ಯಕ್ತಪಡಿಸುತ್ತದೆ.

ಅಮೆರಿಕದ 'ನಾಗರಿಕ ಹಕ್ಕು ಆಂದೋಲನದ ಮಾತೆ' ಎಂದೇ ಪ್ರಸಿದ್ಧರಾಗಿದ್ದ ರೋಸ್ ಲೀ ಪಾರ್ಕ್ಸ್ ನಿಧನಕ್ಕೆ ಜನಪದ ವಿಚಾರ ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಸನ್ಮಾನ್ಯರಿಂದ

೨೦೦೫ ಅಕ್ಟೋಬರ್ ಮಾಹೆಯ ಜನಪದ ವಿಚಾರದ ನಿಮ್ಮ ಲೇಖನ ಗಾಂಧೀ–ವಿಶಿಷ್ಟ ಜೀವನ ಶೈಲಿಯ ಸಂಕೇತ ಓದಿ 'ಹೌದಲ್ಲವೆ? ತಡೆಯುವುದು ಹೇಗೆ? ಚಿಂತಿಸಿದೆ. ಶಿಶುವಿಹಾರಗಳಿಂದಲೇ ಮಕ್ಕಳಿಗೆ ಗಾಂಧೀತರಹ ಬದುಕುವ ಸರಳ ವಿಧಾನ ಕಲಿಸಿಕೊಡಬೇಕಾದ ಜರೂರು ಬಹಳ ಇದೆ ಎನಿಸಿತು. ಇದರಲ್ಲಿ ನಾವು ಸೋತರೆ ದುರಂತ ಎದುರಿಸಲು ಸಿದ್ಧರಾಗಬೇಕಾಗಿದೆ ಎಂಬ ನಿಮ್ಮ ಮಾತು ಸತ್ಯಸ್ಯಸತ್ಯ.

–ಅರ್ಜನಪುರಿ ಅಪ್ಪಾಜಿಗೌಡ. ಮದ್ದೂರು.

ತಮ್ಮ ಜನಪದ ವಿಚಾರ ಪತ್ರಿಕೆ ತಪ್ಪದೇ ಬರುತ್ತಲಿದೆ ಆಸ್ತೆಯಿಂದ ಓದುತ್ತಲಿರುವೆ.

–ನರಸಿಂಹ ದಾಬಡೆ, ಧಾರವಾಡ

೨೦೦೫ ಸೆಪ್ಟೆಂಬರ್ ಮಾಹೆಯ ಜನಪದ ವಿಚಾರದಲ್ಲಿ ಸುರೇಶ್ ವಿಭೂತಿಯವರು ವಿಚಾರ ದೀಪ್ತಿಯಲ್ಲಿ ಮಂಡಿಸಿದ ವಾದ ಸರಿಯಾಗಿದೆ. ದ್ರಾವಿಡ್ ಇನ್ನು ಮೇಲಾದರೂ ಕನ್ನಡದಲ್ಲಿ ಮಾತನಾಡಲಾರಂಭಿಸಬೇಕು, ಇಷ್ಟವಿಲ್ಲದಿದ್ದಲ್ಲಿ ಅವರನ್ನು ಕನ್ನಡ ಹೋರಾಟಗಾರರು, ಚಳುವಳಿಗಾರರು, ರಕ್ಷಣಾವೇದಿಕೆಯವರು ವಿಚಾರಿಸಿಕೊಳ್ಳಲಿ. ಈ ಅಂಶವನ್ನು ದ್ರಾವಿಡ್ ಗಮನಕ್ಕೆ ತರುವ ಪ್ರಯತ್ನವಾಗಲಿ.

–ಎಂ.ಎಸ್. ವೆಂಕಟರಾಮಯ್ಯ, ಮೈಸೂರು

ಸ್ವಾತಂತ್ರ್ಯ ಪೂರ್ವದಲ್ಲಿ ಅಪರೂಪದ ಶೈಕ್ಷಣಿಕ ಸಾಹಿತ್ಯದ ಮಾಸ ಪತ್ರಿಕೆಯಾಗಿ ಜನಪ್ರಿಯವಾಗಿದ್ದ ಪುಸ್ತಕ ಪ್ರಪಂಚದ ಮಾದರಿಯಲ್ಲಿ ಸುರೇಂದ್ರ ಕೌಲಗಿಯವರು ಜನಪದ ವಿಚಾರ ವೈಚಾರಿಕ ಡೈಜೆಸ್ಟನ್ನು ಪ್ರಕಟಿಸುತ್ತಿರುವುದಕ್ಕಾಗಿ ಬಹಳ ಸಂತೋಷವಾಗಿದೆ.

–ಬಸವರಾಜ. ಕೆ. ವಾರಿ, ಗದಗ

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

(–ಸಂಪಾದಕರು)

KA-SKMND-470-2003-05
Regd. no. KAR/KAN/2000/3820

ತೆರೆದ–ಅಂಚೆ

TO,

jANAPADA VICHARA **-** Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, ® . Melkote. Dist- mandya – 571431
Phone : 08236 – 298754 e-mail : janapada@yahoo.com